ಸಂಪುಟ 01 । ಸಂಚಿಕೆ 131 । ಭಾನುವಾರ 29 ಮಾರ್ಚ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ರಾಷ್ಟ್ರೀಯ ನೆವಾಡಾ ದಿನ

ರಾಷ್ಟ್ರೀಯ ನೆವಾಡಾ ದಿನ । ಮಾರ್ಚ್ 29
ನೆವಾಡಾವನ್ನು ಒಕ್ಕೂಟಕ್ಕೆ ಸೇರ್ಪಡೆಗೊಳ್ಳುವ 36 ನೇ ರಾಜ್ಯವಾಗಿ ಆಚರಿಸಲು 2017 ರಲ್ಲಿ ನ್ಯಾಷನಲ್ ಡೇ ಕ್ಯಾಲೆಂಡರ್‌ಲ ಸ್ಥಾಪಿಸಿತು. ರಾಷ್ಟ್ರೀಯ ದಿನದ ಕ್ಯಾಲೆಂಡರ್ ನಮ್ಮ ರಾಷ್ಟ್ರದ ವೈವಿಧ್ಯಮಯ ಸಂಸ್ಕೃತಿ ಮತ್ತು ಇತಿಹಾಸದ ಪ್ರತಿಯೊಂದು ಅಂಶವನ್ನು ಆಚರಿಸಲು ಬದ್ಧವಾಗಿದೆ, ಅದಕ್ಕಾಗಿಯೇ ನಾವು ಹೆಮ್ಮೆಯಿಂದ ರಾಷ್ಟ್ರೀಯ ರಾಜ್ಯ ದಿನಗಳನ್ನು ಪರಿಚಯಿಸಿದ್ದೇವೆ. ಜುಲೈ 13 ರಂದು ಡೆಲವೇರ್‌ನಿಂದ ಪ್ರಾರಂಭಿಸಿ, ಅವರು ಒಕ್ಕೂಟಕ್ಕೆ ಸೇರಿದ ಕ್ರಮದಲ್ಲಿ ವಾರಕ್ಕೆ ಒಂದು ರಾಜ್ಯವನ್ನು ನಾವು ಗೌರವಿಸುತ್ತೇವೆ.

## ಸುಭಾಷಿತ

ನಮ್ಮನ್ನು ನಾವು ಸರಿಪಡಿಸಿಕೊಂಡರೆ, ಇಡೀ ಜಗತ್ತನ್ನು ಸರಿಪಡಿಸಿದಂತೆ. ನಮ್ಮಲ್ಲಿ ನಾವು ಪರಿವರ್ತನೆ ತಂದುಕೊಂಡರೆ, ಜಗತ್ತಿಗೇ ಬೆಳಕು ನೀಡಿದಂತೆ.

ರಮಣ ಮಹರ್ಷಿ

# ಏ.1ರಂದು ಸಿದ್ದಗಂಗಾ ಮಠಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ ಹಿನ್ನೆಲೆಯಲ್ಲಿ ಬಿಗಿ ಭದ್ರತೆ

**ತುಮಕೂರು: ಸಿದ್ದಗಂಗಾ ಮಠದಲ್ಲಿ ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಜಯಂತಿ ಅಂಗವಾಗಿ ಏ.1ರಂದು ನಡೆಯಲಿರುವ ಕಾರ್ಯಕ್ರಮಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾಗವಹಿಸಲಿರುವ ಹಿನ್ನೆಲೆಯಲ್ಲಿ ತುಮಕೂರು ನಗರದಾದ್ಯಂತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ರೂಪಿಸಲಾಗುವುದು ಎಂದು ಜಿಲ್ಲಾಧಿಕಾರಿ ಶುಭಕಲ್ಯಾಣ್ ಮಾಹಿತಿ ನೀಡಿದರು.**

ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯ ಲ್ಲಿ ಮಾತನಾಡಿದ ಅವರು, ಈಗಾಗಲೇ ತುಮಕೂರು ಜಿಲ್ಲೆಗೆ ಉಪರಾಷ್ಟ್ರಪತಿ, ಕೇಂದ್ರ ಗೃಹ ಸಚಿವರು, ರಾಜ್ಯಪಾಲರು ಸೇರಿದಂತೆ ಗಣ್ಯರು ಆಗಮಿಸಿದ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಸೂಕ್ತ ಭದ್ರತೆಯನ್ನು ಒದಗಿಸಿ ಯಶಸ್ವಿಯಾಗಿ ಕಾರ್ಯಕ್ರಮಗಳನ್ನು ಜರುಗಿಸಲಾಗಿದೆ. ಪ್ರಸ್ತುತ ರಾಷ್ಟ್ರಪತಿಯವರ ಕಾರ್ಯಕ್ರಮ ಅತಿಗಣ್ಯರ ಭದ್ರತೆ ಹೊಂದಿರುವುದರಿಂದ ಯಾವುದೇ ಲೋಪವಿಲ್ಲದಂತೆ ಭದ್ರತೆ ಒದಗಿಸುವ ಸಲುವಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಜವಾಬ್ದಾರಿ ನೀಡಿ ನಿಯೋಜನೆ ಮಾಡಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.



ಭದ್ರತೆ ಕುರಿತು ಮಾಹಿತಿ ನೀಡಿದ ಜಿಲ್ಲಾ ಪೊಲೀಸ್ ಅಧೀಕ್ಷಕ ಕೆ.ವಿ. ಅಶೋಕ್ ಅವರು, ದೇಶದ ಪ್ರಥಮ ಪ್ರಜೆ ರಾಷ್ಟ್ರಪತಿ ಅವರ ಆಗಮನದ ಹಿನ್ನೆಲೆಯಲ್ಲಿ ನಗರದಾದ್ಯಂತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲು ವ್ಯವಸ್ಥೆ ಮಾಡಲಾಗಿದೆ ಎಂದರು. ರಾಷ್ಟ್ರಪತಿ ಅವರ ಭದ್ರತೆಗೆ ಸುಮಾರು 15,000 ಪೊಲೀಸ್ ಸಿಬ್ಬಂದಿ ನಿಯೋಜಿಸಲು ಪೊಲೀಸ್ ಇಲಾಖೆ ಸಿದ್ಧತೆ ಮಾಡಿಕೊಂಡಿರುವ ಬಗ್ಗೆ ಮಾಹಿತಿ ನೀಡಿದ ಅವರು, ರಾಷ್ಟ್ರಪತಿ ಆಗಮಿಸಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮತ್ತೆ ನಿರ್ಗಮಿಸುವವರೆಗೆ ತುಮಕೂರು ನಗರದಾದ್ಯಂತ ಪೊಲೀಸ್ ಬಂದೋಬಸ್ತ್ ಮಾಡಲಾಗಿರುತ್ತದೆ. ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಹೆಲಿಪ್ಯಾಡ್, ವಾಹನ ಸಂಚರಿಸುವ ರಸ್ತೆ ಮಾರ್ಗಗಳು ಹಾಗೂ ಕಾರ್ಯಕ್ರಮ ನಡೆಯುವ ಜಾಗ ಸೇರಿದಂತೆ ಎಲ್ಲಾ ಪ್ರದೇಶಗಳಲ್ಲಿ ಪ್ರತ್ಯೇಕವಾದ ತಂಡಗಳನ್ನು ರಚಿಸಿ ಪೊಲೀಸ್ ಬಂದೋಬಸ್ತ್ ಮಾಡಲಾಗುತ್ತಿದೆ.

ಅಲ್ಲದೆ, ಮಾರ್ಚ್ 31ರಂದೇ ತಾಲೀಮು ಪ್ರಕ್ರಿಯೆ ಹಾಗೂ ಪೊಲೀಸ್ ಸಿಬ್ಬಂದಿಗೆ ಮಾಹಿತಿ ಹಾಗೂ ಇನ್ನಿತರ ಚಟುವಟಿಕೆಗಳನ್ನು ಪೊಲೀಸ್ ಇಲಾಖೆ ಹಮಿಕೊಂಡಿರುವುದಾಗಿ ಸಭೆಗೆ ಮಾಹಿತಿ ನೀಡಿದರು. ನಗರದಾದ್ಯಂತ ಎಲ್ಲಾ ರಸ್ತೆಗಳನ್ನು ಪೊಲೀಸ್ ಬಂದೋಬಸ್ತಿನಲ್ಲಿ ಇರಿಸಿರುವ ಹಿನ್ನೆಲೆಯಲ್ಲಿ ನಗರದಲ್ಲಿ ಸಂಚರಿಸುವ ಸಾರ್ವಜನಿಕರಿಗೆ ಪರ್ಯಾಯ ಮಾರ್ಗವನ್ನು ಸೂಚಿಸಲಾಗುವುದು. ಅಲ್ಲದೆ, ಕಾರ್ಯಕ್ರಮ ನಡೆಯುವ ಜಾಗಕ್ಕೆ ಸಾರ್ವಜನಿಕರು, ಭಕ್ತರು ತೆರಳಲು ಪ್ರತ್ಯೇಕ ಪ್ರವೇಶ ದ್ವಾರಗಳನ್ನು ನಿಗದಿಗೊಳಿಸಲಾಗುವುದು ಎಂದು ಅವರು ತಿಳಿಸಿದರು.


ಸಭೆಯಲ್ಲಿ ಭಾಗವಹಿಸಿದ್ದ ಕೇಂದ್ರ ಗುಪ್ತಚರ ಇಲಾಖೆಯ ಸುಹಾಸ್ ಸೂಡ ಅವರು, ರಾಷ್ಟ್ರಪತಿ ಕಾರ್ಯಕ್ರಮಕ್ಕೆ ಅತಿಗಣ್ಯರ ಭದ್ರತೆ ಇರುವುದ–ರಿಂದ ಜಿಲ್ಲಾಡಳಿತದಿಂದ ಎಲ್ಲಾ ರೀತಿಯ ಸೂಕ್ತ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಈಗಾಗಲೇ ಜಿಲ್ಲಾಡಳಿತದಿಂದ ಅಧಿಕಾರಿಗಳನ್ನು ನಿಯೋಜಿಸಿ ಜವಾಬ್ದಾರಿ ವಹಿಸಿರುವುದು ಸ್ವಾಗತಾರ್ಹ. ಅಂತೆಯೇ, ಕಾರ್ಯಕ್ರಮದಲ್ಲಿ ಯಾವುದೇ ಲೋಪವಾಗದಂತೆ ನಿರ್ವಹಿಸಬೇಕಿದೆ ಎಂದರು. ರಾಜ್ಯ ಗುಪ್ತಚರ ಇಲಾಖೆಯ ಪೊಲೀಸ್ ಅಧೀಕ್ಷಕ ಸುರೇಶ್, ಅಪರ ಜಿಲ್ಲಾಧಿಕಾರಿ ಡಾ. ಎನ್. ತಿಪ್ಪೇಸ್ವಾಮಿ, ಸಿದ್ಧಗಂಗಾ ಮಠದ ಪ್ರತಿನಿಧಿ ಮಲ್ಲಿಕಾರ್ಜುನ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯ ನಂತರ ತುಮಕೂರು ವಿಶ್ವವಿದ್ಯಾನಿಲಯದ ಹೆಲಿಪ್ಯಾಡ್ ಹಾಗೂ ಸಿದ್ದಗಂಗಾ ಮಠದ ಕಾರ್ಯಕ್ರಮ ನಡೆಯುವ ವೇದಿಕೆ ಇತ್ಯಾದಿ ಪ್ರದೇಶಗಳಿಗೆ ನಿಯೋಗ ಭೇಟಿ ನೀಡಿ ಪರಿಶೀಲಿಸಿತು.

## ಚೌಡಯ್ಯ ಸಮಾಜದಿಂದ ಶಾಸಕ ಪಾಟೀಲರಿಗೆ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಅಂಬಿಗರ ಚೌಡಯ್ಯ ಸಮಾಜದ ವತಿಯಿಂದ ಕಲ್ಬುರ್ಗಿ ದಕ್ಷಿಣ ಭಾಗದ ಶಾಸಕರಾದ ಅಲ್ಲಮಪ್ರಭು ಪಾಟೀಲರಿಗೆ ಸನ್ಮಾನಿಸಿ ಗೌರವಿಸಲಾಯಿತು.**



ಶನಿವಾರ ಪಟ್ಟಣದ ಆರಾಧ್ಯ ದೈವ ಶ್ರೀ ಬಂಡಿ ಬಸವೇಶ್ವರ ಜಾತ್ರಾ ಮಹೋತ್ಸವದ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸಿದ ಸಂದರ್ಭದಲ್ಲಿ ಅವರನ್ನು ಸಮಾಜದ ಪ್ರಮುಖರಾದ ಸುಭಾಸ ಮೂಕಿಹಾಳ ಹಾಗೂ ಪುರಸಭೆ ಮಾಜಿ ಸದಸ್ಯ ಪರಶುರಾಮ ತಂಗಡಗಿ ಇವರು ಗೌರವಿಸಿದರು. ಈ ಸಮಯದಲ್ಲಿ ಪುರಸಭೆ ಮಾಜಿ ಸದಸ್ಯ ನಿಂಗಣ್ಣ ಕುಂಟೋಜಿ, ಸುರೇಶ ಸರೂರ, ಶಾಂತಗೌಡ ಮದರ್ಕಲ್, ಪಾಟೀಲ ಮತ್ತಿತರರು ಇದ್ದರು.

## ಪ್ರಗತಿಪರ ರೈತ ಹಣಮಂತ ಬೆಳಗುಂಪಿ ಆರ್ಗಾನಿಕ್ ಫೌಂಡೇಶನ್ ವತಿಯಿಂದ ರೈತರಿಗಾಗಿ ಸಾವಯವ ಕೃಷಿ ಕಾರ್ಯಾಗಾರ!

ನೈಜ್ಯ ದೆಸೆ ನ್ಯೂಸ್

**ಅಫಜಲಪುರ: ತಾಲೂಕಿನ ಹಸರಗುಂಡಿಗಿ ಗ್ರಾಮದ ಪ್ರಗತಿಪರ ರೈತ ಹಣಮಂತಪ್ಪ ಬೆಳಗುಂಪಿ ತೋಟದಲ್ಲಿ ಬೆಳಗುಂಪಿ ಆರ್ಗನಿಕ್ ಫೌಂಡೇಶನ,ವತಿಯಿಂದ ಸಾವಯವ ಕೃಷಿ ಬೆಳೆಯುವ ವಿಧಾನದ ಬಗ್ಗೆ ಕಾರ್ಯಾಗಾರ ನಡೆಯಿತು.**

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕೆಕೆಆರಟಿಸಿ ಅಧ್ಯಕ್ಷ ಅರುಣಕುಮಾರ ಪಾಟೀಲ್ ಹಿಂದಿನ ಕಾಲದಲ್ಲಿ ರೈತರು ತಮ್ಮ ಜಮೀನುಗಳಲ್ಲಿ ಬೆಳೆದ ಪುಂಡಿ ಪಲ್ಯಾ, ರೊಟ್ಟಿ, ತಿಪ್ಪೆ ಗೊಬ್ಬರ ಹಾಕಿದ ತರಕಾರಿಗಳು ಒಳ್ಳೆಯ ಸ್ವಾದ ನೀಡುತ್ತಿದ್ದವು.ಅದನ್ನು ನಾವು ನೀವುಗಳು ಪರಂಪರೆಯಾಗಿ ಮುಂದುವ–ರಿಸಿಕೊಂಡು ಹೋಗಬೇಕಾದ ಅನಿವಾರ್ಯತೆ ಇದೆ.ಮನುಷ್ಯರ ಶರೀರಕ್ಕೆ ಒಳ್ಳೆಯ ಆಹಾರ



ಅವಶ್ಯಕತೆ ಇದ್ದು,ರೈತರು ಆರ್ಗ್ಯಾನಿಕ್ ರಸಗೊಬ್ಬರ ಬಳಸಬೇಕು.ಈ ತರಬೇತಿಯ ಸದುಪಯೋಗ ತಾಲೂಕಿನ ರೈತರಿಗೆ ಅನುಕೂಲವಾಗಬೇಕು ಎಂದರು.ಬೆಳಗುಂಪಿ ಸಾವಯವ ಕೃಷಿ ತರಬೇತಿ ಕೇಂದ್ರದಿಂದ ವಿಷಯುಕ್ತ ಆಹಾರ ಪದಾಥ–ರ್ಗಳು ತೊಲಗಿ ಪೌಷ್ಟಿಕ ಆಹಾರ ಧಾನ್ಯಗಳನ್ನು ಪಡೆಯುವಲ್ಲಿ ನಿಸ್ಸಿಮರಾಗಬೇಕು ಎಂದರು.

ತದನಂತರ ಸುಮಾರು ಹತ್ತಾರು ಜನ ರೈತರಿಗೆ ಒಂದು ಬ್ಯಾರೆಲನಷ್ಟು ಸಾವಯವ ರಸಗೊಬ್ಬರಯುಕ್ತ ಮೌಲ್ಯಯುತ ಸಾವಯವ ಲವಣಾಂಶಭ–ರಿತ ಆಗ್ರ್ಯಾನಿಕ್ ಪದಾರ್ಥ ನೀಡಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಲ್ಲನಗೌಡ ಪಾಟೀಲ್ , ಗುರುಗೌಡ, ಡಾ.ಅಶೋಕ್ ಬಾವಿ, ಮಲ್ಲಿಕಾರ್ಜುನ್ ವಾಳಿ, ಸಿದ್ದರಾಮಪ್ಪ ಸೇರಿ, ಖಾಜಾ ಪಟೇಲ್ ಬಿರಾದಾರ್, ಯಶ್ವಂತ್ ಪಟ್ಟೆದಾರ್, ನಿಂಗಣ್ಣ ಒಳಕಟ್ಟಿ, ಶ್ರೀಮಂತ ಬೋಳ ಶೆಟ್ಟಿ, ಲಕ್ಷ್ಮಣಗೌಡ ಪಾಟೀಲ್, ಕುತುಬುದಿನ್ ತೋನಸಳಿ, ಮಹಾಂತಯ್ಯ ಸ್ವಾಮಿ, ಚನ್ನಬಸಪ್ಪ ಪಡಶೆಟ್ಟಿ, ಕಲ್ಲಪ್ಪ ಪಟೇದಾರ್, ಸುಭಾಷ್ ದುಃಖಾನದಾರ್, ರವಿ ಪಟ್ಟೇದಾರ್, ದೇವೇಂದ್ರ ಹೊನ್ನೂರ್, ಮಡಿವಾಳಪ್ಪ ನಾಗಾವಿ, ಚಿದಾನಂದ್ ಇಟಗಿ, ನಾಗರಾಜ್ ಮೇಳಕುಂದಿ, ಶರಣಪ್ಪ ತಳಕೇರಿ, ರವಿ ಮ್ಯಾಕೇರಿ, ಬಸವರಾಜ್ ಮಣೂರ,ಶಿವು ಬೆಳಗುಂಪಿ ನಿರೂಪಿಸಿದರು. ಹಸರಗುಂಡಗಿ, ಸಂಗಾಪುರ್, ಚಿನ್ನ ಮಳ್ಳಿ ಕಿರ ಸಾವಳಗಿ, ಟಾಕಳಿ, ಹೂವಿನಹಳ್ಳಿ, ಉಮ್ಮರಗಿ, ತೆಗೆಳಿ,ಗ್ರಾಮಗಳ ರೈತ ಮುಖಂಡರು ಭಾಗಿಯಾಗಿದ್ದರು.

## ನವೋದಯ ಪರೀಕ್ಷೆ: ಜೆ ಎಸ್ ಎಸ್ ಶಾಲೆಯ ಉತ್ತಮ ಸಾಧನೆ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಸಮೀಪದ ಕೊಡಗಾನೂ–ರಿನ ಜೆ ಎಸ್ ಎಸ್ ಶಾಲೆಯು ನವೋದಯ ತರಬೇತಿ ನೀಡುವುದರಲ್ಲಿ ಜಿಲ್ಲೆಯಲ್ಲಿಯೇ ಪ್ರಖ್ಯಾತಿ ಪಡೆದಿದ್ದು ಈ ವರ್ಷ ಪರೀಕ್ಷೆ ಬರೆದ 28ವಿದ್ಯಾರ್ಥಿಗಳು 90%ಕ್ಕಿಂತ ಹೆಚ್ಚು ಅಂಕ ಪಡೆದು ಉತ್ತಮ ಸಾಧನೆಯನ್ನು ಮಾಡಿದ್ದಾರೆ.**

ವಿಜಯಪುರ ನವೋದಯ ಶಾಲೆಗೆ 5ವಿದ್ಯಾರ್ಥಿಗಳು ಮತ್ತು ಯಾದಗಿರಿ ನವೋದಯ ಶಾಲೆಗೆ 02ವಿದ್ಯಾರ್ಥಿಗಳು ಆಯ್ಕೆ ಆಗುವುದರ ಮೂಲಕ ಒಟ್ಟು ಈ ವರ್ಷ 07ವಿದ್ಯಾರ್ಥಿಗಳು ನವೋದಯ ಶಾಲೆಗೆ ಆಯ್ಕೆ ಆಗಿರುತ್ತಾರೆ.

ಅಭಿನಂದನೆ: ಪರೀಕ್ಷೆಯಲ್ಲಿ ಅಮೋಘ ಸಾಧನೆ ತೋರಿ ಆಯ್ಕೆಯಾದ ಎಲ್ಲಾ ವಿದ್ಯಾರ್ಥಿಗಳಿಗೆ ಜೆ ಎಸ್




ಎಸ್ ಶಾಲೆಯ ಕಾರ್ಯದರ್ಶಿಗಳಾದ ಸಾಹೇಬಗೌಡ ಗಬಸಾವಳಗಿ ಅವರು ಅಭಿನಂದನೆ ಸಲ್ಲಿಸಿದ್ದಾರೆ. ಸಂಸ್ಥೆ ವತಿಯಿಂದ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಏಪ್ರಿಲ್ 07ರಂದು ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

## ಬಸವಸಾಗರ ಜಲಾಶಯದಿಂದ ಏ.20 ರವರೆಗೆ ನೀರು ಹರಿಸಲು ರೈತ ಸಂಘ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಬಸವಸಾಗರ ಜಲಾಶಯದಿಂದ ಬಲದಂಡೆ ಮತ್ತು ರಾಂಪೂರ ಏತ ನೀರಾವರಿ ಯೋಜನೆಯ ನಾಲೆಗಳಿಗೆ ಏಪ್ರಿಲ್ 20 ರವರೆಗೆ ನೀರು ಹರಿಸಬೇಕೆಂದು ಕರ್ನಾಟಕ ರಾಜ್ಯ ರೈತಸಂಘ (ವಾಸುದೇವ ಮೇಟಿ) ಬಣದ ಮುಖಂಡರು ಕೆಬಿಜೆಎನ್‌ಎಲ್ ಕಾರ್ಯನಿರ್ವಾಹ ಅಭಿಯಂತರ ಸುರೇಂದ್ರ ರಡ್ಡಿ ಅವರಿಗೆ ಮನವಿ ಸಲ್ಲಿಸಿದರು.**

ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಏ.3 ರವರೆಗೆ ನೀರು ಹರಿಸುವ ನಿರ್ಧಾರ ಕೈಗೊಂಡಿರುವುದು ಅವೈಜ್ಞಾನಿಕವಾಗಿದೆ. ಇದರಿಂದ ಹಿಂಗಾರಿ ಹಂಗಾಮಿನಲ್ಲಿ ರೈತರು ಬೆಳೆದ ಬೆಳೆಗಳು ಹಾಳಾಗುವ ಸಾಧ್ಯತೆಗಳಿವೆ. ನಾಲೆಯ ಕೊನೆಯ ಭಾಗದ ರೈತರು ತೀವ್ರ



ತೊಂದರೆ ಅನುಭವಿಸಲಿದ್ದಾರೆ . ಏ.20 ರವರೆಗೆ ನೀರು ಹರಿಸುವ ಮೂಲಕ ರೈತರ ಬೆಳೆ ರಕ್ಷಿಸಬೇಕೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ರೈತಸಂಘದ ತಾಲೂಕು ಅಧ್ಯಕ್ಷ ಸಂಗನಗೌಡ ಹೊಸೂರು, ಮುಖಂಡರಾದ ಬಸನಗೌಡ, ಸಹದೇವಪ್ಪ ಈಚನಾಳ, ಸಗರಪ್ಪ ಮೇಟಿ, ಶರಣಗೌಡ, ದುರುಗಪ್ಪ ಗುರಿಕಾರ, ಪ್ರದೀಪ ಸೇರಿದಂತೆ ಇತರರು ಇದ್ದರು.

# ಏ.5ರಂದು ಬಾಬು ಜಗಜೀವನ್ ರಾಂ ಜಯಂತಿ ಅದ್ದೂರಿ ಆಚರಣೆಗೆ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಮಾ 29 ತಾಲೂಕು ಆಡಳಿತ ವತಿಯಿಂದ ಏಪ್ರಿಲ್ 5 ರಂದು ಮಾಜಿ ಪ್ರಧಾನಿ ಹಾಗೂ ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನ್ ರಾಂ ಅವರ ಜಯಂತಿಯನ್ನು ತಾಲ್ಲೂಕಿನಲ್ಲಿ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ.**

ಪಟ್ಟಣದ ಸಹಾಯಕ ಆಯುಕ್ತರ ಕಚೇ–ರಿಯಲ್ಲಿ ಬಸವಣೆಪ್ಪ ಕಲಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಜಯಂತಿ ದಿನದಂದು ಬೆಳಿಗ್ಗೆ 8.30 ಕ್ಕೆ ಪಟ್ಟಣದ ಪದವಿ ಪೂರ್ವ




ಕಾಲೇಜು ಮೈದಾನದಿಂದ ಬಾಬು ಜಗಜೀವನ್ ರಾಂ ಅವರ ಭಾವಚಿತ್ರದೊಂದಿಗೆ ಭವ್ಯ ಮೆರವಣಿಗೆ ಹಮ್ಮಿಕೊಳ್ಳಲಾಗುವುದು, ಮೆರವಣಿಗೆಯಲ್ಲಿ ವಿವಿಧ ಕಲಾತಂಡಗಳು ಭಾಗವಹಿಸಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಲಿವೆ.

ಮೆರವಣಿಗೆಯ ನಂತರ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಸಮಾರಂಭವನ್ನು ಆಯೋಜಿಸಲಾಗಿದ್ದು, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಹಾಗೂ ಅತ್ಯುತ್ತಮ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಗುವುದು ಎಂದು ಹೇಳಿದರು. ಅಂದು ಬೆಳಿಗ್ಗೆ 8 ಗಂಟೆಗೆ ತಾಲೂಕಿನ ಎಲ್ಲಾ ಸರ್ಕಾರಿ ಕಚೇರಿಗಳು, ಸರ್ಕಾರಿ ಹಾಗೂ ಖಾಸಗಿ ಶಾಲೆಗಳು ಮತ್ತು ಕಾಲೇಜುಗಳಲ್ಲಿ ಮಹನೀಯರ ಜಯಂತಿಯನ್ನು ಆಚರಿಸುವಂತೆ ಸೂಚಿಸಲಾಗಿದೆ.

ಕಾರ್ಯಕ್ರಮದಲ್ಲಿ ತಾಲೂಕಿನ ಎಲ್ಲಾ ಸರ್ಕಾರಿ ಅಧಿಕಾರಿಗಳು, ಸಿಬ್ಬಂದಿಗಳು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಅವರು ಮನವಿ ಮಾಡಿದರು. ಈ ಸಂದರ್ಭದಲ್ಲಿ ತಹಶೀಲ್ದಾರ್ ಸತ್ಯಮ್ಮ, ಡಿವೈ–ಎಸ್‌ಪಿ ದತ್ತಾತ್ರೇಯ ಕರ್ನಾಡ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರವೀಂದ್ರ ಉಪ್ಪಾರ್, ಪುರಸಭೆ ಮುಖ್ಯಾಧಿಕಾರಿ ನಟರಾಜ್, ಜಗನಾಥ್ ಪ್ರವೀಣ್ ಭೋಗರ್ ಬಿಇಒ ಸುಜಾತ ಹೂನೂರು, ಜೆಸ್ಕಾಂ ಎಇಇ ಬನ್ನೆಪ್ಪ ಕರಿಬಂಟನಾಳ, ಅಬಕಾರಿ ಇನ್ಸ್‌ಪೆಕ್ಟರ್ ಲಕ್ಷ್ಮೀದೇವಿ, ಪಶು ವೈದ್ಯಾಧಿಕಾರಿ ಅಮರೇಗೌಡ, ಲೋಕೋಪಯೋಗಿ ಇಲಾಖೆ–ಎಇಇ ಪ್ರಕಾಶ, ಕೆಆರ್‌ಡಿಎಲ್ ಎಇಇ ಹನುಮಪ್ಪ, ಪಂಚ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಪಾಮಯ್ಯ ಮುರಾರಿ, ಹನುಮಂತಪ್ಪ ಕುಣೆಕೆಲ್ಲೂರು, ಮಹಾದೇವಪ್ಪ ಪರಾಂಪುರು, ರಮೇಶ್ ಗೋಸೆ, ಶರಣಪ್ಪ ಕಟ್ಟಿಮನಿ, ಮೋಹನ್ ಗೋಸ್ಲೆ , ಸೇರಿದಂತೆ ಹಲವರು ಇದ್ದರು.

## ನೇಮಕಾತಿ ಪ್ರಕಟಣೆ

ವಾಯುಪಡೆ ಶಾಲೆ ಜಲಹಳ್ಳಿ ನೇಮಕಾತಿ 2026 ? 26 ಪಿಜಿಟಿ, ಟಿಜಿಟಿ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಮಾರ್ಚ್ 28, 2026 ವಾಯುಪಡೆ ಶಾಲೆ ಜಲಹಳ್ಳಿ ನೇಮಕಾತಿ 2026: 26 ಪಿಜಿಟಿ, ಟಿಜಿಟಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ವಾಯುಪಡೆ ಶಾಲೆ ಜಲಹಳ್ಳಿ ಮಾರ್ಚ್ 2026 ರ ವಾಯುಪಡೆ ಶಾಲೆ ಜಲಹಳ್ಳಿ ಅಧಿಕೃತ ಅಧಿಸೂಚನೆಯ ಮೂಲಕ ಪಿಜಿಟಿ, ಟಿಜಿಟಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಬೆಂಗಳೂರು ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 11-ಏಪ್ರಿಲ್-2026 ರಂದು ಅಥ-ವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 27-03-2026 ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 11-ಏಪ್ರಿಲ್-2026 ಅಧಿಕೃತ ವೆಬ್‌ಸೈಟ್: afsjal.org

## ಶ್ರೀ ಚನ್ನಬಸವೇಶ್ವರ ಶಾಲೆಯ 15ನೇ ಶಾಲಾ ವಾರ್ಷಿಕೋತ್ಸವ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ :ನರಸಪ್ಪ ಯಾದವ್

ನೈಜ್ಯ ದೆಸೆ ನ್ಯೂಸ್

**ಅರಕೇರಾ: ತಾಲೂಕಿನ ಗಲಗ ಗ್ರಾಮದಲ್ಲಿ ಶ್ರೀ ಚನ್ನಬಸವೇಶ್ವರ ಪೂರ್ವ ಮತ್ತು ಕಿರಿಯ ಪ್ರಾಥ-ಮಿಕ ಶಾಲೆಯ 15ನೇ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಶ್ರೀ ಆರೂಢ ಮಠದ ಪೂಜ್ಯರಾದ ಶ್ರೀ ಅಯ್ಯಣ್ಣ ತಾತನವರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು.**

ಮುಖ್ಯ ಅತಿಥಿಗಳಾಗಿ ಮಾತನಾಡಿದ ನರಸಪ್ಪ ಯಾದವ್ ಅವರು ಮೊದಲು ಮಕ್ಕಳಿಗೆ ಉತ್ತಮ ಸಂಸ್ಕಾರವನ್ನು ಕಲಿಸಿ ಎನ್ನುವ ಕಿವಿ ಮಾತನ್ನು ಪಾಲಕರಿಗೆ ಹೇಳಿದರು. ಮಕ್ಕಳ ಕಲಿಕೆ ಕೇವಲ ಶಿಕ್ಷಕರ ಜವಾಬ್ದಾರಿಯಲ್ಲ, ಪಾಲಕರು ಮತ್ತು ಶಿಕ್ಷಕರು ಕೈಜೋಡಿಸಿದಾಗ ಮಾತ್ರ ಮಕ್ಕಳ ಅಭಿವೃದ್ಧಿಯಾಗುತ್ತಾರೆ ಎಂದು ಪಾಲಕ-ರಿಗೆ ಸಲಹೆಗಳನ್ನು ನೀಡಿದರು. ಗ್ರಾಮೀಣ ಭಾಗದಲ್ಲಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಮಕ್ಕಳಿಗೆ ಶಿಕ್ಷಣ ನೀಡುವುದು ಎಂದರೆ ತುಂಬಾ ಕಷ್ಟ.



ಇಂತಹ ಗ್ರಾಮೀಣ ಪ್ರದೇಶದಲ್ಲಿ ಶ್ರೀ ಚನ್ನಬಸವೇಶ್ವರ ಶಿಕ್ಷಣ ಸಂಸ್ಥೆಯವರು ಗಲಗ ಗ್ರಾಮದ ಮಕ್ಕಳ ಅಭಿವೃದ್ಧಿಗೋಸ್ಕರ ಇಡೀ ಕುಟುಂಬವೇ ತ್ಯಾಗ ಮಾಡಿದ್ದಾರೆ ಇಂತಹ ವಿದ್ಯಾ ಸಂಸ್ಥೆಯಲ್ಲಿ ಕಲಿತ ಮಕ್ಕಳು ಮುಂದೆ ಉನ್ನತ ಹುದ್ದೆಗಳನ್ನು ಅಲಂಕ-ರಿಸಲಿ ಎನ್ನುವ ಆಸೆಯನ್ನು ವ್ಯಕ್ತಪಡಿಸಿದರು. ಖಾಸಗಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶಂಕರಲಿಂಗಯ್ಯ ತಾತನವರು ಮಾತನಾಡಿ ಮಕ್ಕಳಿಗೆ ಮೊಬೈಲ್ ಬಳಕೆ ಕಡಿಮೆ ಮಾಡುವ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಮುಖ್ಯಗುರುಗಳಾದ ಶ್ರೀ ಮತಿ ಯಲ್ಲಮ್ಮ ಯಾದವ್ ಅವರು ಸಂಸ್ಥೆಯ ವಾರ್ಷಿಕ ವರದಿಯನ್ನು ಮಂಡಿಸಿದರು. ಮಕ್ಕಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಮತ್ತು 12ನೇ ಶತಮಾನದ ಶಿವಶರಣರ ವಚನಾಮೃತ ಕಾರ್ಯಕ್ರಮ ತುಂಬಾ ಅಚ್ಚುಕಟ್ಟಾಗಿ ನೆರವೇರಿತು.

ಶ್ರೀ ಚನ್ನಬಸವೇಶ್ವರ ಶಾಲಾ ವಾರ್ಷಿಕೋತ್ಸವ ಸಂದರ್ಭದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಸನ್ಮಾನಿಸಿ ಗೌರವಿಸಲಾಯಿತು ಮತ್ತು ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಈ ಸಂದರ್ಭದಲ್ಲಿ ಗೌರಿ ಜಿ ನಾಯಕ, ಶ್ರೀ ಚನ್ನಬಸವೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಮುದುಕಪ್ಪ ಯಾದವ್, ದುರ್ಗಪ್ಪ ಗೌಡ ಮಾಲೀ ಪಾಟೀಲ್, ಅಯ್ಯಪ್ಪ ಕೊಂಗಂಡಿ, ಮಾರೆಪ್ಪ ಕೋತ್ತದೊಡ್ಡಿ, ಮಲ್ಲಯ್ಯ ಹೂಗಾರ, ಮಿರಜ್ ಅಹ್ಮದ್ ಹೂವಿನ ಹಡಗಲಿ, ಶಾಬೂದಿನ್, ವೆಂಕಟೇಶ್ ಮಲ್ಲಟ, ಚನ್ನಬಸವ ಕೊಂಡಿಕಾರ್, ಅಬೀಬ್ ಪಾಷಾ, ಕರಿಯಪ್ಪ ಚಟ್ನಹಳ್ಳಿ, ಶಿವಣ್ಣ ಯಾದವ್, ಆಂಜನೇಯ ಯಾದವ್ ಹಾಗೂ ಸಹಶಿಕ್ಷಕ ವೃಂದದವರು ಮತ್ತು ಪಾಲಕರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಇಂದು ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಐಪಿಎಲ್ 19ನೆ ಆವೃತ್ತಿಗೆ ಅದ್ದೂರಿ ಚಾಲನೆ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಐಪಿಎಲ್ 19ನೆ ಆವೃತ್ತಿಗೆ ಇಂದು ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಚಾಲನೆ ದೊರೆಯಲಿದೆ. 18ನೆ ಆವೃತ್ತಿಯ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡ ಮತ್ತು ಸನ್‌ರೈಸರ್‌ರಸ ಹೈದರಾಬಾದ್ (ಎಸ್‌ಆರ್‌ಹೆಚ್) ತಂಡ ರಾತ್ರಿ 7.30ಕ್ಕೆ ಆರಂಭವಾಗಲಿರುವ ಉದ್ಘಾಟನಾ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.**




ಕಳೆದ ಬಾರಿ ಪ್ರಶಸ್ತಿ ಗೆದ್ದಿದ್ದ ಆರ್‌ಸಿಬಿ ವಿಜಯೋತ್ಸವದ ವೇಳೆ ಸಂಭವಿಸಿದ್ದ ಕಾಲ್ತುಳಿತ ದುರಂತದ ಕಹಿ ನೆನಪನ್ನು ಅಳಿಸಿ ಹಾಕುವಂತೆ ನಗರದಲ್ಲಿ ಐಪಿಎಲ್ ಸಂಭ್ರಮ ಮನೆ ಮಾಡಿದೆ. ಆರ್‌ಸಿಬಿ ಜಯಘೋಷ ಅನುರಣಿಸಲಾರಂಭಿಸಿದೆ. ಎಲ್ಲೆಡೆ ಅಭಿಮಾನಿಗಳು ವಿರಾಟ್ ಕೊಹ್ಲಿ ಅವರ ಚಿತ್ರವಿರುವ ಟೀ ಶರ್ಟ್ ಧರಿಸಿ ದ್ವಿಚಕ್ರ ವಾಹನಗಳಲ್ಲಿ ಸುತ್ತಾಡುತ್ತ ಜೈಕಾರ ಹಾಕುತ್ತಿರುವ ದೃಶ್ಯಗಳು ಗೋಚ-ರಿಸಿವೆ. ಕಳೆದ ವರ್ಷ ಸಂಭ್ರಮಾಚರಣೆ ಸಂದರ್ಭದಲ್ಲಿ ಸಂಭವಿಸಿದ್ದ ದುರಂತದಿಂದ ಎಚ್ಚೆತ್ತಿರುವ ಪೊಲೀಸ್ ಇಲಾಖೆ ಸ್ಟೇಡಿಯಂನಲ್ಲಿ ಮತ್ತು ಸುತ್ತಮುತ್ತ ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಿದ್ದು, 2000ಕ್ಕೂ ಅಧಿಕ ಪೊಲೀಸರನ್ನು ನಿಯೋಜಿಸಿದೆ. ಜನರ ನೂಕುನುಗ್ಗಲನ್ನು ತಪ್ಪಿಸಲು ಈ ಬಾರಿ ಆನ್‌ಲೈನ್‌ನಲ್ಲಿ ಮಾತ್ರ ಟಿಕೆಟ್ ಮಾರಾಟ ವ್ಯವಸ್ಥೆ ಮಾಡಲಾಗಿದೆ. ಉದ್ಘಾಟನಾ ಸಮಾರಂಭ ಇಲ್ಲದೆ 19ನೆ ಆವೃತ್ತಿ ಚಾಲನೆಗೊಳ್ಳಲಿದೆ. ವಿಶ್ವದ ಅತ್ಯಂತ ಶ್ರೀಮಂತ, ಪ್ರತಿಷ್ಠಿತ ಕ್ರಿಕೆಟ್ ಪಂದ್ಯಾವಳಿ ಎಂಬ ಕೀರ್ತಿ ಪಡೆದಿರುವ ಐಪಿಎಲ್‌ನ ಈ ಬಾರಿಯ ಆವೃತ್ತಿಯಲ್ಲಿ ಎರಡು ತಿಂಗಳಿಗೂ ಅಧಿಕ ಸಮಯ ಅಂದರೆ 65 ದಿನ ಪಂದ್ಯಾವಳಿ ಜರುಗಲಿದೆ. 10 ತಂಡಗಳು 13 ನಗರಗಳಲ್ಲಿ 74 ಪಂದ್ಯಗಳನ್ನು ಆಡಲಿವೆ. ಎರಡು ಹಂತಗಳಲ್ಲಿ ಪಂದ್ಯಾವಳಿ ನಡೆಯಲಿದೆ. ಹಲವಾರು ಹಿರಿಯ ಮತ್ತು ಕಿರಿಯ ಆಟಗಾರರ ಮೇಲೆ ಗಮನ ಕೇಂದ್ರೀಕೃತವಾಗಿದೆ. ಅವರಲ್ಲಿ ವಿರಾಟ್ ಕೊಹ್ಲಿ, ರೋಹಿತ್ ಶರ್ಮ, ಮಹೇಂದ್ರ ಸಿಂಗ್ ಧೋನಿ, ಅಭಿಷೇಕ್ ಶರ್ಮಾ, ವೈಭವ್ ಸೂರ್ಯವಂಶಿ, ದೇವದತ್ತ ಪಡಿಕ್ಕಲ್ ಸೇರಿದ್ದಾರೆ.ಧೋನಿಗೆ ಇದು ಕೊನೆಯ ಐಪಿಎಲ್ ಎನ್ನಲಾಗುತ್ತಿದೆ. ಈ ಬಾರಿಯೂ ಆರ್‌ಸಿಬಿ ತಂಡ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡವೆನಿಸಿಕೊಂಡಿದೆ.ಮೇ 31ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲೇ ಫೈನಲ್ ಪಂದ್ಯ ನಡೆಯಲಿದೆ. ವಿನಾಕಾರಣ ಕ್ರೀಡಾಂಗಣದ ಬಳಿ ಬರಬೇಡಿ ಬೆಂಗಳೂರು,ಮಾ.28- ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಐಪಿಎಲ್ ಕ್ರಿಕೆಟ್ ಪಂದ್ಯ ವೀಕ್ಷಿಸಲು ಟಿಕೆಟ್ ಪಡೆದವರು ಮಾತ್ರ ಕ್ರೀಡಾಂಗಣದ ಬಳಿ ಬರಬೇಕೇ ವಿನಃ ಟಿಕೆಟ್ ಇಲ್ಲದವರು ಬರಬೇಡಿ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ಅವರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ. ಈ ಸಂಜೆಯೊಂದಿಗೆ ಮಾತನಾಡಿದ ಅವರು,ಕ್ರೀಡಾಂಗಣದ ಸುತ್ತ ಬಿಗಿ ಭದ್ರತೆ ಮಾಡಲಾಗಿದೆ. ಯಾವುದೇ ಘಟನೆಗಳು ನಡೆಯದಂತೆ ಅಧಿಕಾರಿಗಳು ಸೇರಿದಂತೆ 2500 ಕ್ಕೂ ಹೆಚ್ಚು ಪೊಲೀಸರನ್ನು ಬಂದೋಬಸ್ತ್ ಮಾಡಿದ್ದೇವೆ. ಟಿಕೆಟ್ ಇಲ್ಲದಿರುವವರು ವಿನಾಕಾರಣ ಕ್ರೀಡಾಂಗಣದ ಬಳಿ ಬಂದು ಸುತ್ತಾಡಬೇಡಿ ಮನೆಯಲ್ಲಿ ಅಥವಾ ತಮಗೆ ಅನುಕೂಲವಾಗುವ ಸ್ಥಳಗಳಲ್ಲಿ ಕುಳಿತುಕೊಂಡು ಟಿವಿಯಲ್ಲಿ ಪಂದ್ಯ ವೀಕ್ಷಿಸಿ ಎಂದು ಮನವಿ ಮಾಡಿದರು. ಕ್ರೀಡಾಂಗಣದ ಸುತ್ತಮುತ್ತಲಿನಲ್ಲಿರುವ ಎಲ್ಲಾ ರಸ್ತೆಗಳನ್ನು ಬಂದ್ ಮಾಡಿದ್ದೇವೆ, ಯಾರನ್ನೂ ಓಡಾಡಲು ಬಿಡುವುದಿಲ್ಲ ಎಂದು ಈಗಾಗಲೇ ಹೇಳಿದ್ದೇವೆ . ಟಿಕೆಟ್ ಹೊಂದಿರುವವರು ತಮ ಸ್ವಂತ ವಾಹನ ಬಳಸದೆ ಮೆಟ್ರೋ ಹಾಗೂ ಸಾರ್ವಜನಿಕ ಸಾರಿಗೆಯಲ್ಲಿ ಕ್ರೀಡಾಂಗಣಕ್ಕೆ ಬರಬೇಕೆಂದು ಮನವಿ ಮಾಡಿದ್ದಾರೆ. ಸಾರ್ವಜನಿಕರು ಯಾವುದೇ ಗೊಂದಲಕ್ಕೆ ಅವಕಾಶ ಕೊಡಬಾರದು, ಆನಂದದಿಂದ ಪಂದ್ಯ ವೀಕ್ಷಿಸಿ. ಶಾಂತಿ ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಪೊಲೀಸರೊಂದಿಗೆ ಸಹಕರಿಸಿ ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

## ಮಕ್ಕಳಿಗಾಗಿ ವಿಶೇಷ ಬೇಸಿಗೆ ರಜೆ ತರಬೇತಿ ಶಿಬಿರ: ಏಪ್ರಿಲ್ 01 ರಿಂದ ಆರಂಭ



ನೈಜ್ಯ ದೆಸೆ ನ್ಯೂಸ್

**ಕೊಲ್ಹಾರ: ಮಕ್ಕಳ ಬೇಸಿಗೆ ರಜೆಯನ್ನು ಕೇವಲ ಆಟಕ್ಕಷ್ಟೇ ಸೀಮಿತಗೊಳಿಸದೆ, ಅದನ್ನು ಜ್ಞಾನಾರ್ಜನೆಯ ಸುಂದರ ಪಯಣವನ್ನಾಗಿಸಲು ಏಪ್ರಿಲ್ 01 2026 ರಿಂದ ವಿಶೇಷ 'ಬೇಸಿಗೆ**

**ಶಿಬಿರದ ವಿಶೇಷ ಚಟುವಟಿಕೆಗಳು**

- ಫೋನಿಕ್ಸ್ & ಮೂಲಭೂತ ಇಂಗ್ಲಿಷ್ ಹಸ್ತಾಕ್ಷರ ಅಭ್ಯಾಸ
- ರೈಮ್ಸ್ & ಕಥೆ ಹೇಳುವಿಕೆ
- ಚಿತ್ರಕಲೆ & ಬಣ್ಣ ಹಚ್ಚುವಿಕೆ
- ಆಟಗಳು & ಮನರಂಜನಾ ಚಟುವಟಿ-ಕೆಗಳು
- ಮೂಲಭೂತ ಗಣಿತ ಕೌಶಲ್ಯ

ಈ ತರಬೇತಿಯು ಕೇವಲ ಪಠ್ಯಕ್ಕೆ ಸೀಮಿತವಾಗದೆ,

**ರಜೆ ತರಬೇತಿ ಶಿಬಿರ'*ವನ್ನು ಹಮ್ಮಿಕೊಳ್ಳಲಾಗಿದೆ.**

LKG, UKG ಹಾಗೂ 1 ರಿಂದ 7ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಈ ಶಿಬಿರವನ್ನು ಆಯೋಜಿಸಲಾಗಿದ್ದು, ಮಕ್ಕಳಲ್ಲಿ ಅಡಗಿರುವ ಸೃಜನಶೀಲತೆಯನ್ನು ಹೊರಹಾಕಲು ಇದು ಉತ್ತಮ ವೇದಿಕೆಯಾಗಲಿದೆ.

ಮಕ್ಕಳ ಆತ್ಮವಿಶ್ವಾಸ ಮತ್ತು ಸಂವಹನ ಕೌಶಲ್ಯವನ್ನು ಹೆಚ್ಚಿಸುವ ಗು-ರಿಯನ್ನು ಹೊಂದಿದೆ. ಒತ್ತಡರಹಿತ ಮತ್ತು ಸುರಕ್ಷಿತ ವಾತಾವರಣದಲ್ಲಿ ಮಕ್ಕಳು ನಲಿಯುತ್ತಾ ಕಲಿಯಲು ಇಲ್ಲಿ ಅವಕಾಶವಿದೆ. ರಜೆಯ ಅವಧಿಯನ್ನು ವ್ಯರ್ಥ ಮಾಡದೆ, ಉಪಯುಕ್ತವಾಗಿ ಬಳಸಿಕೊಳ್ಳಲು ಪೋಷಕರು ತಮ್ಮ ಮಕ್ಕಳನ್ನು ಈ ಶಿಬಿರಕ್ಕೆ ಸೇರಿಸಬೇಕೆಂದು ಆಡಳಿತ ಮಂಡಳಿಯವರು ಕೋರಿದ್ದಾರೆ. "ಕಲಿಕೆಯೊಂದಿಗೆ ಮನರಂಜನೆ, ಸೃಜನಶೀಲತೆಗೆ ಹೊಸ ಆಯಾಮ" ಎಂಬುದು ಈ ಶಿಬಿರದ ಮೂಲಮಂತ್ರವಾಗಿದೆ.

## ಸುವರ್ಣ ಕನ್ನಡಿಗ-2026 'ಸಾಧಕರ ಪ್ರಶಸ್ತಿ'ಗೆ ಸಿದ್ಧನಗೌಡ ತುರುವಿಹಾಳ ಆಯ್ಕೆ

ನೈಜ್ಯ ದೆಸೆ ನ್ಯೂಸ್

**ತುರ್ವಿಹಾಳ: ಕನ್ನಡಪ್ರಭ ದಿನಪತ್ರಿಕೆ ಹಾಗೂ ಏಷ್ಯಾನೆಟ್ ಸುವರ್ಣ ನ್ಯೂಸ್ ವತಿಯಿಂದ ನೀಡಲಾಗುವಪ್ರತಿಷ್ಠಿತ"ಸುವರ್ಣಕನ್ನಡಿಗ-2026" ಸಾಧಕರ ಪ್ರಶಸ್ತಿಗೆ ಮಸ್ಕಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಸಿದ್ಧನಗೌಡ ತುರುವಿಹಾಳ ಅವರು ಆಯ್ಕೆಯಾಗಿದ್ದಾರೆ.**

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಮಹನೀಯರನ್ನು ಗುರುತಿಸಿ ಗೌರವಿಸುವ ಈ ಯೋಜನೆಯಡಿ, ಸಿದ್ಧನಗೌಡ ಅವರ ಸಮಾಜಮುಖಿ ಕಾರ್ಯಗಳು ಮತ್ತು ಅಭಿವೃದ್ಧಿ ಪರ ಚಿಂತನೆಗಳನ್ನು ಪರಿಗಣಿಸಿ ಈ ಗೌರವಕ್ಕೆ ಪಾತ್ರರಾಗಿದ್ದಾರೆ. ಸಿದ್ಧನಗೌಡ ತುರುವಿಹಾಳ ಅವರು ಮಸ್ಕಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ನಗರದ ಸುಸ್ಥಿರ ಬೆಳವಣಿಗೆಗೆ ಶ್ರಮಿಸುತ್ತಿದ್ದಾರೆ. ಅದರೊಂದಿಗೆ, ಕೆಪಿಸಿಸಿ (KPCC) ಎಸ್‌ಟಿ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಸಮಾಜದ



ತುಳಿತಕ್ಕೊಳಗಾದ ವರ್ಗಗಳ ಏಳಿಗೆಗಾಗಿ ಶ್ರಮಿಸುತ್ತಿರುವ ಯುವ ನಾಯಕರಾಗಿದ್ದಾರೆ. ಇವರ ನಾಯಕತ್ವದಲ್ಲಿ ಮಸ್ಕಿ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳು ವೇಗ ಪಡೆದುಕೊಂಡಿವೆ. ರಾಜ್ಯದ ಪ್ರತಿಷ್ಠಿತ ಮಾಧ್ಯಮ ಸಂಸ್ಥೆಗಳಿಂದ ದೊರೆತಿರುವ ಈ ಗೌರವಕ್ಕೆ ಕ್ಷೇತ್ರದ ಜನತೆ, ಅಭಿಮಾನಿಗಳು ಹಾಗೂ ವಿವಿಧ ಸಂಘ-ಸಂಸ್ಥೆಗಳು ಹರ್ಷ ವ್ಯಕ್ತಪಡಿಸಿವೆ.

ಸಿದ್ಧನಗೌಡ ಅವರ ಮುಂದಿನ ಸಮಾಜಸೇವಾ ಕಾರ್ಯಗಳಿಗೆ ಎಲ್ಲರೂ ಶುಭ ಹಾರೈಸಿದ್ದಾರೆ. ಕೇವಲ ರಾಜಕೀಯವಲ್ಲದೆ, ಶಿಕ್ಷಣ ಮತ್ತು ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಇವರು ವಹಿಸುತ್ತಿರುವ ಆಸಕ್ತಿಯನ್ನು ಪ್ರಕಟಣೆಯಲ್ಲಿ ಉಲ್ಲೇಖಿಸಬಹುದು. ಪ್ರಶಸ್ತಿಗೆ ಆಯ್ಕೆಯಾದ ಹಿನ್ನೆಲೆಯಲ್ಲಿ ಶ್ರೀ ಸಿದ್ಧನಗೌಡ ಅವರು ತಮ್ಮನ್ನು ಬೆಂಬಲಿಸಿದ ಕ್ಷೇತ್ರದ ಜನತೆಗೆ ಮತ್ತು ಆಯ್ಕೆ ಸಮಿತಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

## ಪ್ರಜಾವಾಣಿ ಸಾಧಕಿಯರ 2026 ಕಾರ್ಯಕ್ರಮದಲ್ಲಿ "ಅವಳ ಸಾಧನೆ ಸಂಭ್ರಮ ಪ್ರಶಸ್ತಿ" ವಿತರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ನೈಜ್ಯ ದೆಸೆ ನ್ಯೂಸ್

**ಮೈಸೂರು: ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಆಯೋಜಿಸಿದ್ದ "ಪ್ರಜಾವಾಣಿ ಸಾಧಕಿಯರು 2026" ಕಾರ್ಯಕ್ರಮದ ಅಂಗವಾಗಿ ನಡೆದ "ಅವಳ ಸಾಧನೆ ಸಂಭ್ರಮ ಪ್ರಶಸ್ತಿ" ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾಗವಹಿಸಿ ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದ ಮಹಿಳೆಯರನ್ನು ಸನ್ಮಾನಿಸಿದರು.**

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ, ಮಹಿಳೆಯರ ಸಾಧನೆಗಳು ಸಮಾಜದ ಅಭಿವೃದ್ಧಿಗೆ ಪ್ರೇರಣೆಯಾಗಿದ್ದು, ಮಹಿಳಾ ಶಕ್ತಿಯೇ ರಾಷ್ಟ್ರದ ಪ್ರಗತಿಯ ಮೂಲಸ್ತಂಭವಾಗಿದೆ ಎಂದು ಹೇಳಿದರು. ಶಿಕ್ಷಣ, ಆರೋಗ್ಯ,




ಉದ್ಯಮಶೀಲತೆ, ಕಲೆ, ಸಾಹಿತ್ಯ, ಸಮಾಜಸೇವೆ ಹಾಗೂ ಆಡಳಿತ ಕ್ಷೇತ್ರಗಳಲ್ಲಿ ಮಹಿಳೆಯರು ಸಾಧಿಸಿರುವ ಯಶಸ್ಸು ರಾಜ್ಯದ ಹೆಮ್ಮೆ ಎಂದು ಅವರು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ಪ್ರಜಾವಾಣಿ ಪತ್ರಿಕೆಯ ಸಂಪಾದಕರಾದ ರವೀಂದ್ರ ಭಟ್ ಕಾರ್ಯಕ್ರಮದ ಉದ್ದೇಶವನ್ನು ವಿವರಿಸಿ, ಸಮಾಜದಲ್ಲಿ ಮೌನವಾಗಿ ಸೇವೆ ಸಲ್ಲಿಸುತ್ತಿರುವ ಮಹಿಳೆಯರನ್ನು ಗುರುತಿಸಿ ಗೌರವಿಸುವುದೇ ಈ ವೇದಿಕೆಯ ಮುಖ್ಯ ಆಶಯ ಎಂದು ತಿಳಿಸಿದರು.


ಕಾರ್ಯಕ್ರಮದಲ್ಲಿ ರಾಣಿ ಪ್ರಮೋದಾ ದೇವಿ, ಅಕ್ಕೈ ಪದ್ಮಶಾಲಿ ಸೇ-ರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದು ಪ್ರಶಸ್ತಿ ಪುರಸ್ಕೃತರಿಗೆ ಶುಭಾಶಯ ಕೋರಿದರು. ಪ್ರಶಸ್ತಿ ವಿಜೇತ ಮಹಿಳೆಯರಿಗೆ ಸ್ಮರಣಿಕೆ, ಪ್ರಶಸ್ತಿ ಫಲಕ ಹಾಗೂ ಗೌರವ ಪತ್ರಗಳನ್ನು ಪ್ರದಾನ ಮಾಡಲಾಯಿತು. ಮಹಿಳಾ ಸಾಧನೆಗಳ ಕುರಿತ ಪ್ರೇರಣಾದಾಯಕ ಅನುಭವ ಹಂಚಿಕೆ, ಸಂವಾದ ಕಾರ್ಯಕ್ರಮಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಸಮಾರಂಭಕ್ಕೆ ವಿಶೇಷ ಕಂಗೊಳ ನೀಡಿದವು. ಸಮಾಜದಲ್ಲಿ ಮಹಿಳೆಯರ ಸಾಧನೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಇಂತಹ ಕಾರ್ಯಕ್ರಮಗಳು ಯುವಪೀಳಿಗೆಗೆ ಸ್ಫೂರ್ತಿದಾಯಕವಾಗಿವೆ ಎಂದು ಗಣ್ಯರು ಅಭಿಪ್ರಾಯಪಟ್ಟರು.

## ಎ 04 ರಂದು ಭಕ್ತಿಭಾವದಿಂದ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ಬ್ರಹ್ಮರಥೋತ್ಸವ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಗ್ರಾಮದಲ್ಲಿ ಎ 04 ಗುರುವಾರ ದಂದು ಭಕ್ತಿಭಾವದಿಂದ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ಬ್ರಹ್ಮರಥೋತ್ಸವ ಅದ್ದೂರಿಯಾಗಿ ನಡೆಯಲಿದೆ. ಇಂದು ದಿನಾಂಕ 28-03-2026ರಂದು ರಂಗನಾಥ ದೇವಸ್ಥಾನದಲ್ಲಿ ಪೂಜಾರಿಗಳು ವರದಿಗಾರರ ಜೊತೆ ಮಾತನಾಡುತ್ತಾ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಈ ಮಹೋತ್ಸವ ಜರುಗಲಿದ್ದು, ಯುಗಾದಿಯಿಂದಲೇ ಕಾರ್ಯಕ್ರಮಗಳು ಆರಂಭವಾಗಿ ಪೂರ್ಣಿಮೆಯ ಚಿತ್ತ ನಕ್ಷತ್ರದಂದು ರಥೋತ್ಸವವು ನೆರವೇರುತ್ತದೆ.**

ಮಾಲಾಧಾರಿಗಳ ಪ್ರವಚನಕ್ಕಾಗಿ ಆಗಮಿಸುವ ವರದಾಚಾರ್ಯರು ಮಾತನಾಡಿ, ಜಾಲಹಳ್ಳಿಯ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ಇತಿಹಾಸವು 15ನೇ ಶತಮಾನಕ್ಕೆ ಸೇರಿದದ್ದು ಎಂದು ತಿಳಿಸಿದರು. ಮುದುಗಲ್ಲಿನಿಂದ ಉಪ್ಪಿನ ಚೀಲದಲ್ಲಿ ದೇವರು ಬಂದು ಇಲ್ಲಿ ನೆಲೆಸಿದ್ದಾನೆ



ಎಂಬ ನಂಬಿಕೆ ಇದೆ. ಕಳೆದ 8?10 ವರ್ಷಗಳಿಂದ ಗೋವಿಂದ ಮಾಲಾದಾರಿಗಳ ಸಂಖ್ಯೆ ಸುಮಾರು 500ಕ್ಕೂ ಹೆಚ್ಚಾಗಿದೆ ಎಂದು ಅವರು ಹೇಳಿದರು. ರಥೋತ್ಸವದ ಸಂದರ್ಭದಲ್ಲಿ ಪ್ರತಿದಿನ ವಿಭಿನ್ನ ವಾಹನ ಸೇವೆಗಳು ನಡೆಯುತ್ತವೆ. ಪೂರ್ಣಿಮೆಯ ಚಿತ್ತ ನಕ್ಷತ್ರದಂದು ರಥ-ೋತ್ಸವ ನಡೆಯುವ ವೇಳೆ ಸಂಜೀವರಾಯನ ಸನ್ನಿಧಿಯಲ್ಲಿ ಬೇವಿನ ಗಿಡ ಸಿಹಿಯಾಗುತ್ತದೆ ಎಂಬ ಪ್ರತೀಕವನ್ನು ಭಕ್ತರು ನಂಬುತ್ತಾರೆ.

ಶ್ರೀ ಲಕ್ಷ್ಮಿ ರಂಗನಾಥ ದೇವಸ್ಥಾನದ ದೇವಸ್ಥಾನದ ಪೂಜಾರಿ ಗಳಾದ ವೆಂಕೋಬ ಪೂಜಾರಿ ಮಾತನಾಡಿ, ಊರಿನ ಐದು ವತಂದಾರರು ( ಊರಿನ ದೊರೆಗಳು, ದೇಸಾಯಿ, ಕುಲಕರ್ಣಿ ಮನೆತನಗಳು ಮತ್ತು ದೈವದವರು) ಬಂದ ನಂತರ

**ರಥೋತ್ಸವ ಕಾರ್ಯಕ್ರಮಗಳ ವೇಳಾಪಟ್ಟಿ:**

- **29-03-2026 (ರವಿವಾರ) ಏಕಾದಶಿ: ಹನುಮಂತನ ಸೇವೆ**
- **30-03-2026 (ಸೋಮವಾರ) ದ್ವಾದಶಿ: ಕುದುರೆ ಸೇವೆ**
- **31-03-2026 (ಮಂಗಳವಾರ) ತ್ರಯೋದಶಿ: ಗರುಡ ವಾಹನ ಸೇವೆ**
- **01-04-2026 (ಬುಧವಾರ) ಚತುರ್ದಶಿ: ಆನೆ ಸೇವೆ**
- **02-04-2026 (ಗುರುವಾರ) ಬ್ರಹ್ಮರಥೋತ್ಸವ**

**ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ದೇವಸ್ಥಾನದ ಪೂಜಾರಿಗಳು ಮನವಿ ಮಾಡಿದ್ದಾರೆ.**

ಎಲ್ಲಾ ಕಾರ್ಯಕ್ರಮಗಳು ಆರಂಭವಾಗುತ್ತವೆ ಎಂದರು. ಭಕ್ತರು 9 ದಿನ ಕಾಲ ಚಪ್ಪಲಿ ಧರಿಸದೆ ವ್ರತ ಪಾಲಿಸುವ ಪದ್ಧತಿ ಇದೆ. ರಥೋತ್ಸವದ ಒಂದು ದಿನ ಮೊದಲು ಹಾಗೂ ರಥೋತ್ಸವದ ದಿನ ನೀರಿನ ಆಟ (ಜಲಕ್ರೀಡೆ) ನಡೆಯುವುದು ವಿಶೇಷ. ಪ್ರತಿ ವರ್ಷ ಸಾವಿರಾರು ಭಕ್ತರು ವಿವಿಧ ರಾಜ್ಯಗಳು ಹಾಗೂ ಜಿಲ್ಲೆಗಳಿಂದ ಭಾಗವಹಿಸುತ್ತಿದ್ದು,

ಈ ಉತ್ಸವವು ಜಾತಿಭೇದವಿಲ್ಲದೆ ಸರ್ವಜನರ ಸಂಗಮವಾಗಿರುತ್ತದೆ. ಇದೇ ಸಂದರ್ಭದಲ್ಲಿ ಸುರೇಶ್ ಪೂಜಾರಿ ಮಾತನಾಡಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಭಾಗವಹಿಸಿ ರಥೋತ್ಸವ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಹೇಳಿದರು ಈ ಸಂದರ್ಭದಲ್ಲಿ ದೇವಸ್ಥಾನದ ಪೂಜಾರಿಗಳಾದ ಸುರೇಶ್ ಪೂಜಾರಿ, ಗಂಗಾಧರ್ ಪೂಜಾರಿ, ವೆಂಕೋಬ ಪೂಜಾರಿ ಹಾಗೂ ಶ್ರೀ ಲಕ್ಷ್ಮಿ ರಂಗನಾಥ ಗೋವಿಂದ ಸೇವಾ ಸಮಿತಿ ಅಧ್ಯಕ್ಷ ವೆಂಕೋಬ ತ್ಯಾಪ್ಲಿ, ರಂಗಪ್ಪ ಬಂಡಿ ಮತ್ತು ಅನೇಕ ಗೋವಿಂದ ಮಾಲಾದಾರಿ ಯುವಕರು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ರೋಬೋಟಿಕ್ಸ್ ಎಂಜಿನಿಯರಿಂಗ್

ರೋಬೋಟಿಕ್ಸ್ ಎಂಜಿನಿಯರಿಂಗ್ ಕೋರ್ಸ್‌ನ್ನು ವಿದ್ಯಾರ್ಥಿಗಳು ರೋಬೋಟಿಕ್ಸ್ ಮತ್ತು ಸ್ವಯಂಚಾಲಿತ ತಂತ್ರಜ್ಞಾನ ಕ್ಷೇತ್ರದಲ್ಲಿ ಅಗತ್ಯವಿರುವ ಮೂಲಭೂತ ಹಾಗೂ ಉನ್ನತ ಮಟ್ಟದ ಎಂಜಿನಿಯರಿಂಗ್ ತತ್ವಗಳನ್ನು ಅರಿತುಕೊಳ್ಳುವಂತೆ ವಿನ್ಯಾಸಗೊಳಿಸಲಾಗಿದೆ. ಈ ಕೋರ್ಸ್‌ನಲ್ಲಿ ಯಾಂತ್ರಿಕ ಎಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ಸೈನ್ಸ್ ಹಾಗೂ ಕೃತಕ ಬುದ್ಧಿಮತ್ತೆ (Artificial Intelligence) ಅಂಶಗಳನ್ನು ಸಮನ್ವಯಗೊಳಿಸಿ ಅಧ್ಯಯನ ಮಾಡಲಾಗುತ್ತದೆ. ರೋಬೋಟ್ ವಿನ್ಯಾಸ, ನಿರ್ಮಾಣ, ಪ್ರೋಗ್ರಾಮಿಂಗ್ ಮತ್ತು ನಿಯಂತ್ರಣ ವ್ಯವಸ್ಥೆಗಳ ಕುರಿತು ವಿದ್ಯಾರ್ಥಿಗಳಿಗೆ ಸೈದ್ಧಾಂತಿಕ ಜ್ಞಾನ ಹಾಗೂ ಪ್ರಾಯೋಗಿಕ ತರಬೇತಿ ನೀಡಲಾಗುತ್ತದೆ. ಅನ್ವಯಿಕ ತಾಪಗತಶಾಸ್ತ್ರ (Applied Thermodynamics), ನಿಯಂತ್ರಣ ವ್ಯವಸ್ಥೆಗಳು (Control Systems), ಎಂಬೆಡೆಡ್ ಸಿಸ್ಟಮ್ಸ್ (Embedded Systems), ಸೆನ್ಸರ್ ತಂತ್ರಜ್ಞಾನ, ಮಷಿನ್ ಲರ್ನಿಂಗ್, ರೋಬೋಟಿಕ್ ಸ್ವಯಂಚಾಲಿತ ವ್ಯವಸ್ಥೆಗಳು ಸೇರಿದಂತೆ ಹಲವಾರು ವಿಷಯಗಳನ್ನು ಒಳಗೊಂಡಿದೆ. ಈ ಕೋರ್ಸ್ ವಿದ್ಯಾರ್ಥಿಗಳಲ್ಲಿ ಸಮಸ್ಯೆ ಪರಿಹಾರ ಸಾಮರ್ಥ್ಯ, ತಾಂತ್ರಿಕ ನಿಪುಣತೆ, ನವೀನ ಆವಿಷ್ಕಾರ ಚಿಂತನೆ ಹಾಗೂ ಕೈಗಾರಿಕಾ ಅವಶ್ಯಕತೆಗಳಿಗೆ ತಕ್ಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಸಹಾಯ ಮಾಡುತ್ತದೆ. ಉತ್ಪಾದನಾ ಕೈಗಾರಿಕೆ, ಆರೋಗ್ಯ ಕ್ಷೇತ್ರ, ಅಂತರಿಕ್ಷ ಸಂಶೋಧನೆ, ಸ್ವಯಂಚಾಲಿತ ವಾಹನಗಳು ಹಾಗೂ ಸ್ಮಾರ್ಟ್ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳನ್ನು ಈ ಕೋರ್ಸ್ ಒದಗಿಸುತ್ತದೆ. ಎಂಬುದು 4 ವರ್ಷಗಳ ಪದವಿ ಕೋರ್ಸ್ ಆಗಿದ್ದು, ರೋಬೋಟ್ ವಿನ್ಯಾಸ, ಉತ್ಪಾದನೆ ಮತ್ತು ಅಪ್ಲಿಕೇಶನ್‌ಗಳ ಬಗ್ಗೆ ಕಲಿಸುತ್ತದೆ. 10+2 (PCM) ಮುಗಿಸಿದ ವಿದ್ಯಾರ್ಥಿಗಳು KCET/COMEDK/JEE ಮೂಲಕ ಪ್ರವೇಶ ಪಡೆಯಬಹುದು. ಇಂಜಿನಿಯರಿಂಗ್ ತತ್ವಗಳು, ಎಲೆಕ್ಟ್ರಾನಿಕ್ಸ್, ಮತ್ತು ೦ಖ ಅನ್ನು ಒಳಗೊಂಡಿರುವ ಈ ಕೋರ್ಸ್, ಉತ್ಪಾದನಾ ಮತ್ತು ತಂತ್ರಜ್ಞಾನ ವಲಯಗಳಲ್ಲಿ ಉತ್ತಮ ಉದ್ಯೋಗಾವಕಾಶಗಳನ್ನು ಒದಗಿಸುತ್ತದೆ. B.Tech Robotics Engineering Course Details in Kannada (ಕೋರ್ಸ್ ವಿವರಗಳು): ಕೋರ್ಸ್ ಅವಧಿ: 4 ವರ್ಷಗಳು (8 ಸೆಮಿಸ್ಟರ್‌ಗಳು). ಅರ್ಹತೆ (Eligibility): ದ್ವಿತೀಯ ಪಿಯುಸಿ ಅಥವಾ 10+2 (ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತ–PCM ನಲ್ಲಿ ಕನಿಷ್ಠ 50% ಅಂಕಗಳು). ಪ್ರವೇಶ ಪರೀಕ್ಷೆಗಳು: KCET/COMEDK: ಕರ್ನಾಟಕದ ಕಾಲೇಜುಗಳಿಗೆ ಪ್ರವೇಶ ಪಡೆಯಲು. ಎಇಇ ಒಚಿಟಿ: ರಾಷ್ಟ್ರಮಟ್ಟದ ಸಂಸ್ಥೆಗಳಿಗೆ. ಮುಖ್ಯ ವಿಷಯಗಳು (Syllabus): ರೋಬೋಟಿಕ್ ಮೆಕ್ಯಾನಿಸಮ್ ಮತ್ತು ವಿನ್ಯಾಸ. ಕಂಟ್ರೋಲ್ ಸಿಸ್ಟಮ್ಸ್ (Control Systems). ಎಂಬೆಡೆಡ್ ಸಿಸ್ಟಮ್ಸ್ (Embedded Systems). ಕೃತಕ ಬುದ್ಧಿಮತ್ತೆ (Artificial Intelligence/AI) ಮತ್ತು ಯಂತ್ರ ಕಲಿಕೆ (Machine Learning). ಅಪ್ಲೈಡ್ ಥರ್ಮೋಡೈನಾಮಿಕ್ಸ್ (Applied Thermodynamics). ಉದ್ಯೋಗದ ಅವಕಾಶಗಳು (Career Scope): ರೋಬೋಟಿಕ್ಸ್ ಇಂಜಿನಿಯರ್ (Robotics Engineer). ಆಟೊಮೇಷನ್ ಸ್ಪೆಷಲಿಸ್ಟ್ (Automation Specialist). ರೋಬೋಟ್ ಪ್ರೋಗ್ರಾಮರ್. ಡಿಸೈನ್ ಇಂಜಿನಿಯರ್ (Design Engineer).

## ನಾಲ್ಕನೇ ದಿನದ ಎಸ್ ಎಸ್ ಎಲ್ ಸಿ ಪರೀಕ್ಷೆ: ಬಳಗಾನೂರು

**ನೈಜ್ಯ ದೆಸೆ ನ್ಯೂಸ್**

**ಮಸ್ಕಿ: ತಾಲೂಕಿನ ಬಳಗಾನೂರು ಪಟ್ಟಣದ ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢಶಾಲೆಯಲ್ಲಿ 2026–2027ನೇ ಸಾಲಿನ ಎಸ್,ಎಸ್,ಎಲ್,ಸಿ ವಾರ್ಷಿಕ ಪರೀಕ್ಷೆ ಪ್ರಾರಂಭವಾಗಿದ್ದು ಮಾರ್ಚ್ 28 ಶನಿವಾರದಂದು ವಿದ್ಯಾರ್ಥಿಗಳು ನಾಲ್ಕನೇ ದಿನದ ಗಣಿತ ಪರೀಕ್ಷೆ ಬರೆದರು.**



ಒಟ್ಟು 322 ವಿದ್ಯಾರ್ಥಿಗಳಲ್ಲಿ 320 ವಿದ್ಯಾರ್ಥಿಗಳು ಪರೀಕ್ಷೆ ಬರೆದರು. 2 ವಿದ್ಯಾರ್ಥಿಗಳು ಗೈರು ಇದ್ದರು ಎಂದು ಶಾಲೆಯ ಮುಖ್ಯ ಅಧಿಕ್ಷರಕರಾದ ಅಮರನಾಥ ಹಳ್ಳೂರು ತಿಳಿಸಿದರು. ಈ ಸಂದರ್ಭದಲ್ಲಿ ಮಾರ್ಗಾಧಿಕಾರಿ ಬಸವರಾಜ ಆನೆಗುಂದಿ ಕಸ್ಟೋಡಿಯನ್ ದೈಹಿಕ ಶಿಕ್ಷಣ ಶಿಕ್ಷಕ ಮಲ್ಲನಗೌಡ, ಸ್ಥಾನಿಕ ಜಾಗೃತ ದಳ ಸಿದ್ಧರಾಮೇಶ್ವರ ಹಿರೇಮಠ, ಮೊಬೈಲ್ ಸ್ವಾಧೀನ ಅಧಿಕಾರಿ ಗಜಾನಂದ ಬಡಿಗೇರ, ದೈನಿಕ ಶಿಕ್ಷಣ ಶಿಕ್ಷಕ ದೊಡ್ಡಯ್ಯ, ಬಸವರಾಜ್ ಯಾದಗಿರಿ ಮತ್ತಿತರು ಇದ್ದರು.

## ಶಾಲಾ ಮಟ್ಟದಲ್ಲೇ ಭಾವೈಕ್ಯತೆ ಬೆಳೆಸಬೇಕು :ಫಾದರ್ ಸುರೇಶ್ ವಿನ್ಸೆಂಟ್

**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ಭಾವೈಕ್ಯತೆ ಶಾಲಾ ಮಟ್ಟದಲ್ಲೇ ಪ್ರಾರಂಭವಾಗಬೇಕು, ವಿದ್ಯಾರ್ಥಿಗಳಲ್ಲಿ ಸೌಹಾರ್ದತೆ, ಸಹಿಷ್ಣುತೆ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸುವ ಜವಾಬ್ದಾರಿ ಶಾಲೆಗಳ ಮೇಲಿದೆ ಎಂದು ಸೆಂಟ್ ಮೇರಿಸ್ ಚರ್ಚ್‌ನ ಫಾದರ್ ಸುರೇಶ್ ವಿನ್ಸೆಂಟ್ ಹೇಳಿದರು.**

ಅವರು ಪಟ್ಟಣದ ರಿಜ್ ಎಜುಕೇಶನ್ ಇಂಟರ್ನ್ಯಾಷನಲ್ ಶಾಲೆಯ ಆವರಣದಲ್ಲಿ ನಡೆದ ಶಿಕ್ಷಣ ಸಂಸ್ಥೆಯ 7ನೇ ವರ್ಷದ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡುತ್ತಾ, ವಿದ್ಯಾರ್ಥಿಗಳು ಕೇವಲ ಪಾಠ್ಯಪುಸ್ತಕಗಳ ಜ್ಞಾನಕ್ಕಷ್ಟೇ ಸೀಮಿತವಾಗದೆ, ಉತ್ತಮ ನಾಗರಿಕರಾಗಿ ಬೆಳೆದು ಸಮಾಜದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ತಿಳಿಸಿದರು.

ಇಂತಹ ವಾರ್ಷಿಕೋತ್ಸವಗಳು ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಹೊರತೆಗೆದು




ಅವರ ಆತ್ಮವಿಶ್ವಾಸವನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಪೋಷಕರು ಮತ್ತು ಶಿಕ್ಷಕರು ಮಕ್ಕಳಿಗೆ ಉತ್ತಮ ಮಾರ್ಗದರ್ಶನ ನೀಡಿದಾಗ ಮಾತ್ರ ಸಮಗ್ರ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಹೇಳಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಅಖಿಲ ಭಾರತ ವೀರಶೈವ ಅಂಗಾಯತ ಮಹಾಸಭಾದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಹಾಗೂ ವಕೀಲರಾದ ಸಿದ್ದಲಿಂಗಪ್ಪ ವಕೀಲರು ನೆರವೇರಿಸಿ, ಶಿಕ್ಷಣ ಸಂಸ್ಥೆಗಳು ಸಮಾಜ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದು ಅಭಿಪ್ರಾಯಪಟ್ಟರು. ಉತ್ತಮ ಶಿಕ್ಷಣವು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಪ್ರಮುಖವಾಗಿದ್ದು, ಪ್ರತಿಯೊಬ್ಬರೂ ಶಿಕ್ಷಣಕ್ಕೆ ಆದ್ಯತೆ ನೀಡಬೇಕು ಎಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಪುರಸಭೆ ನಾಮನಿರ್ದೇಶನ ಸದಸ್ಯ ವಿಜಯಕುಮಾರ ಗೌಡ, ಖಾಸಗಿ ಕಾಲೇಜುಗಳ ಉಪನ್ಯಾಸಕರ ಸಂಘದ ಅಧ್ಯಕ್ಷ ಆಂಜನೇಯ್ಯ ನಸ್ಲಾಪೂರು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ತಾಲೂಕು ಅಧ್ಯಕ್ಷ ಶಿವಕುಮಾರ್ ಚಲ್ಮಲ್, ವೆಂಕಟೇಶ್ವರ ಮಹಾವಿದ್ಯಾಲಯದ ಪ್ರಾಂಶುಪಾಲ ಶಂಕ್ರಪ್ಪ ನಕ್ಕುಂದಿ, ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಹುಸೇನ್ ಬಾಷಾ ನಕ್ಕುಂದಿ, ಕಾರ್ಯದರ್ಶಿ ನದಾಫ್ ಖಾಜಾಬೀ ಸೇರಿದಂತೆ ಶಿಕ್ಷಕ ವೃಂದ, ಪಾಲಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ನೆಲೋಗಿಯಲ್ಲಿ ಕಲ್ಯಾಣ ಕರ್ನಾಟಕ ಜಾನಪದ ವೈಭವ ಸಾಂಸ್ಕೃತಿಕ ಕಾರ್ಯಕ್ರಮ ಯಶಸ್ವಿ




**ನೈಜ್ಯ ದೆಸೆ ನ್ಯೂಸ್**

**ಜೇವರ್ಗಿ: ಜಟ್ಟಿಂಗರಾಯ ಜಾನಪದ ಸಾಂಸ್ಕೃತಿಕ ಕಲಾಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ "ಕಲ್ಯಾಣ ಕರ್ನಾಟಕ ಜಾನಪದ ವೈಭವ" ಸಾಂಸ್ಕೃತಿಕ ಕಾರ್ಯಕ್ರಮ ನೆಲೋಗಿಯಲ್ಲಿ ಅದ್ದೂರಿಯಾಗಿ ಜರುಗಿತು.**

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಿರಕ್ತಮಠದ ಶ್ರೀ ಮ. ನಿ. ಪ್ರ. ಸಿದ್ಧಲಿಂಗ ಮಹಾಸ್ವಾಮಿಗಳು ವಹಿಸಿ ಮಾತನಾಡಿ, ಜಾನಪದ ವೈಭವವು ಜನರಿಂದ ಜನರ ಬಾಯಿಂದ ಹರಿದು ಬಂದ ಅಮೂಲ್ಯ ಕಲೆ ಆಗಿದ್ದು, ಅದು ನಶಿಸದಂತೆ ಉಳಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಹೇಳಿದರು. ಗ್ರಾಮೀಣ ಮಟ್ಟದಲ್ಲಿ ಅಡಗಿರುವ ಕಲಾವಿದರನ್ನು ಗುರುತಿಸಿ, ಅವರಿಗೆ ವೇದಿಕೆ ಕಲ್ಪಿಸುವ ಕಾರ್ಯವನ್ನು ಸಂಘ ಸಂಸ್ಥೆಗಳು ಇನ್ನಷ್ಟು ಚುರುಕಾಗಿ ಕೈಗೊಳ್ಳಬೇಕು ಎಂದು ಕರೆ ನೀಡಿದರು.

ಈ ದಿಸೆಯಲ್ಲಿ ಜಟ್ಟಿಂಗರಾಯ ಜಾನಪದ ಸಾಂಸ್ಕೃತಿಕ ಕಲಾ ಸಂಘದ ಕಾರ್ಯ ಶ್ಲಾಘನೀಯವಾಗಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರ ಅತ್ಯಂತ ಮಹತ್ವದ್ದು ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದ ಉದ್ಘಾಟನೆಯನ್ನು ರೈತ ಸಂಘದ ಅಧ್ಯಕ್ಷರಾದ ಬಾಬುಗೌಡ ವಿಭೂತಿ ಮಾತನಾಡಿ, ಜಾನಪದ ಕಲೆಯನ್ನು ಉಳಿಸಿ ಬೆಳೆಸಲು ಎಲ್ಲರೂ ಕೈಜೋಡಿಸಬೇಕು ಎಂದರು. ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷರಾದ ಭೂತಾಳಿ ಬಾಸಗಿ, ಆರೋಗ್ಯ ಇಲಾಖೆಯ ರೇಣುಕ ಬಿ.ಹೆಚ್., ಭೀಮರಾಯ ದೇಸುಣಗಿ, ಭೀಮರಾಯ ಕಾಚಾಪುರ (ಗ್ಯಾರಂಟಿ ಯೋಜನೆ ಸದಸ್ಯ), ಅಶೋಕ್ ಕಂಕಿ (ಕೋಲಿ ಸಮಾಜದ ಅಧ್ಯಕ್ಷ), ಮೌನೇಶ್ ಸಿ. ಜಳಕಿ (ಗ್ರಾಮ ಪಂಚಾಯತ್ ಸದಸ್ಯ), ಜಗದೀಶ್ ನಡುಗಟ್ಟಿ, ಸಾಗರ್ ನಡುಗಟ್ಟಿ (ಅಂಬೇಡ್ಕರ್ ಸೇನೆ ಅಧ್ಯಕ್ಷ), ಮಲ್ಲಮ್ಮ ಸಿ. ಹಿಪ್ಪರಗಿ, ಮಲ್ಲಮ್ಮ ಮಲ್ಲಿಕಾರ್ಜುನ, ಕಮಲಾಬಾಯಿ ಅಮೃತ ಗುಜಗೊಂಡ, ಜಯಶ್ರೀ ಎಸ್. ಮಾಲಗತ್ತಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಲ್ಯಾಣಕುಮಾರ್ ಗೊರಗುಂಡಗಿ ಅವರಿಂದ ಸುಗಮ ಸಂಗೀತ, ಮಾಂತೇಶ್ ಕಾಳಗಿ ಅವರಿಂದ ಜನಪದ ಗೀತೆ, ಶರಣಬಸವ ಛತ್ರಿ ಅವರಿಂದ ವಚನ ಗಾಯನ, ಯಲ್ಲಾಲಿಂಗ ಯಡ್ರಾಮಿ ಅವರಿಂದ ವಾದ್ಯ ಸಹಕಾರ ನೀಡಲಾಯಿತು. ರವಿ ಮೊರಟಗಿ, ಪವನ್ ಕುಮಾರ್ ಬಿ ನೆಲೋಗಿ, ಸಿದ್ದರಾಮ ಯಡ್ರಾಮಿ ಸೇರಿದಂತೆ ಹಲವರು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರ್ವಹಿಸಿದರು. ಈ ಕುರಿತು ಸಂಘದ ಪ್ರಧಾನ ಕಾರ್ಯದರ್ಶಿ ಬಲಭೀಮ್ ಎಂ. ನೆಲೋಗಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಿವಶರಣೆ ಅಕ್ಕಮಹಾದೇವಿ ಮಹಿಳಾ ಟ್ರಸ್ಟ್ 11ನೇ ವಾರ್ಷಿಕೋತ್ಸವ ಹಾಗೂ ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮ

**ನೈಜ್ಯ ದೆಸೆ ನ್ಯೂಸ್**

**ಕಲಬುರಗಿ: ನಗರದ ಬಸವೇಶ್ವರ ಆಸ್ಪತ್ರೆಯ ಎದುರುಗಡೆಯಲ್ಲಿರುವ ವಿದ್ಯಾನಗರದ ಕಾಲೋನಿಯ ಮಲ್ಲಿಕಾರ್ಜುನ ಸಮುದಾಯ ಭವನದ ಆವರಣದಲ್ಲಿ ಏಪ್ರಿಲ್–2 ರಂದು ಸಾಯಂಕಾಲ 6:00 ಗಂಟೆಗೆ, ಶಿವಶರಣೆ ಅಕ್ಕಮಹಾದೇವಿ ಮಹಿಳಾ ಟ್ರಸ್ಟಿನ 11ನೇ ವಾರ್ಷಿಕೋತ್ಸವ ಸಮಾರಂಭ ಹಾಗೂ ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮ ಅಕ್ಕಮಹಾದೇವಿ ಮಹಿಳಾ ಟ್ರಸ್ಟ್ ಹಾಗೂ ವಿದ್ಯಾನಗರ ವೇಲ್‌ಫೇರ್ ಸೋಸೈಟಿಯ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದು ಇದೇ ಸಂದರ್ಭದಲ್ಲಿ ಅಕ್ಕಮಹಾದೇವಿ ಮಹಿಳಾ ಟ್ರಸ್ಟಿನ್ ಬಳಗದವರಿಂದ ಸಾಮೂಹಿಕವಾಗಿ ಗೀಗಿಪದ ಜರುಗಲಿದೆ ಎಂದು ವಿದ್ಯಾನಗರ ವೇಲ್‌ಫೇರ್ ಸೋಸೈಟಿ ಕಾರ್ಯದರ್ಶಿ ಶಿವರಾಜ ಅಂಡಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**




ಸಾಯಂಕಾಲ 6:00 ಗಂಟೆಗೆ ಸಂಗೀತಾ ಕಾರ್ಯಕ್ರಮ, 6:30 ಗಂಟೆಗೆ ಅಕ್ಕಮಹಾದೇವಿ ತೊಟ್ಟಿಲು ಕಾರ್ಯಕ್ರಮ, 7:00 ಗಂಟೆಗೆ ಟ್ರಸ್ಟಿನ್ ವಾರ್ಷಿಕೋತ್ಸವ ಸಮಾರಂಭದ ಉದ್ಘಾಟನೆ ಕಲಬುರಗಿ ಜಿಲ್ಲೆಯ ಜಿಲ್ಲಾಧಿಕಾರಿಗಳಾದ, ಮಾನ್ಯ ಫೌಜಿಯಾ ತರನ್ನುಮ್ಮ ನೇರವೇರಿಸಲಿದ್ದಾರೆ. ಎಮ್.ಆರ್.ಎಮ್.ಸಿ ಕಾಲೇಜಿನ ಸಹ–ಪ್ರಾಧ್ಯಾಪಕರು, ಹಾಗೂ ಕದಳಿ ಶ್ರೀ ಆಸ್ಪತ್ರೆಯ ನಿರ್ದೇಶಕರಾದ ಡಾ. ಭಾಗ್ಯಶ್ರೀ ಶರಣಪ್ರಕಾಶ ಪಾಟೀಲ ಉಪನ್ಯಾಸ ನೀಡಲಿದ್ದಾರೆ.

ಇದೇ ಸಂದರ್ಭದಲ್ಲಿ ಡಾ.ಶಿವಲೀಲಾ ಚಟ್ನಳ್ಳಿ ಹಾಗೂ ಉಮೇಶ ಶೆಟ್ಟಿ ಅವರಿಗೆ ವಿಶೇಷ ಸತ್ಕಾರ ಸಮಾರಂಭ ಜರುಗುವುದು. ವಿದ್ಯಾನಗರ ವೇಲ್‌ಫೇರ್ ಸೋಸೈಟಿ ಅಧ್ಯಕ್ಷ ಮಲ್ಲಿನಾಥ ದೇಶಮುಖ, ಕಾರ್ಯದರ್ಶಿ ಶಿವರಾಜ ಅಂಡಗಿ, ಅತಿಥಿಗಳಾಗಿ ಆಗಮಿಸಲಿದ್ದಾರೆ. ಟ್ರಸ್ಟಿನ್ ಅಧ್ಯಕ್ಷ ಶ್ರೀಮತಿ ರತ್ನಮ್ಮ ನಿಂಬೂರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಟ್ರಸ್ಟಿನ ಪದಾಧಿಕಾರಿಗಳಾದ ವಿಜಯಲಕ್ಷ್ಮಿ ರಟಕಲ್, ರಾಜೇಶ್ರೀ ಕಂಠಿ, ತಾರಾ ಪಾಟೀಲ, ಮಧು ಹಿಂದೊಡ್ಡಿ, ಹಾಗೂ ಇತರರು ಉಪಸ್ಥಿತರಿರುವರು.

## ಸನ್‌ರೈಸ್ ಕಾಲೇಜಿನಲ್ಲಿ ಸೋಶಿಯಲ್ ಮೀಡಿಯಾ ಮತ್ತು ವೃತ್ತಿ ಬದ್ಧತೆಯ ಶನಿವಾರದ ವಿಶೇಷ ಉಪನ್ಯಾಸ

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ನಗರದ ಪ್ರತಿಷ್ಠಿತ ಸನ್‌ರೈಸ್ ಡಿ–ಫಾರ್ಮಸಿ, ನರ್ಸಿಂಗ್, ಪಾರಾ ಮೆಡಿಕಲ್ ಕಾಲೇಜಿನಲ್ಲಿ ಪ್ರತೀ ಶನಿವಾರದಂತೆ ಹಮ್ಮಿಕೊಳ್ಳಲಾಗುವ ವಿಶೇಷ ಉಪನ್ಯಾಸ ಕಾರ್ಯಕ್ರಮವು ಇಂದು ಅತ್ಯಂತ ಅರ್ಥಪೂರ್ಣವಾಗಿ ಜರುಗಿತು.**

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಅಜೀಂ ಪ್ರೇಮ್‌ಜೀ ಫೌಂಡೇಶನ್‌ನ ಸಿಂಧನೂರು ಪದಾಧಿಕಾರಿಗಳಾದ ಅಯ್ಯನಗೌಡ ಸರ್ ಹಾಗೂ ಭಾರತಿ ತಿವಾರಿ ಮೇಡಂ ಅವರು ಪ್ರಸಕ್ತ ಸಾಲಿನ ಜ್ವಲಂತ ವಿಷಯವಾದ 'ಸೋಶಿಯಲ್ ಮೀಡಿಯಾ (ಸಾಮಾಜಿಕ ಜಾಲತಾಣ)' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಸಾಮಾಜಿಕ ಜಾಲತಾಣಗಳು ಇಂದಿನ



ವಿದ್ಯಾರ್ಥಿ ಜೀವನದಲ್ಲಿ ಹೇಗೆ ಪ್ರಭಾವ ಬೀರುತ್ತವೆ ಮತ್ತು ಅವುಗಳನ್ನು ಸಕಾರಾತ್ಮಕವಾಗಿ ಹೇಗೆ ಬಳಸಿಕೊಳ್ಳಬೇಕು ಎಂಬುದರ ಬಗ್ಗೆ ಅಯ್ಯನಗೌಡ ಅವರು ಸವಿಸ್ತಾರವಾಗಿ ಮಾತನಾಡಿದರು. "ತಂತ್ರಜ್ಞಾನವು ಕೇವಲ ಮನೋರಂಜನೆಗಷ್ಟೇ ಸೀಮಿತವಾಗದೆ, ಜ್ಞಾನಾರ್ಜನೆಗೆ ದಾರಿಯಾಗಬೇಕು" ಎಂದು ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಂತರ ಮಾತನಾಡಿದ ಭಾರತಿ ತಿವಾರಿ ಮೇಡಂ ಅವರು, ನರ್ಸಿಂಗ್ ವೃತ್ತಿಯ ಮಹತ್ವ ಮತ್ತು ಸೇವಾ ಮನೋಭಾವದ ಬಗ್ಗೆ ಬೆಳಕು ಚೆಲ್ಲಿದರು. "ನರ್ಸಿಂಗ್, ಪಾರಾ ಮೆಡಿಕಲ್, ಫಾರ್ಮಸಿ ಎಂಬುದು ಕೇವಲ ವೃತ್ತಿಯಲ್ಲ, ಅದು ಮಾನವೀಯತೆಯ



ಪರಮೋಚ್ಚ ಸೇವೆ. ರೋಗಿಗಳ ಶುಶ್ರೂಷೆಯಲ್ಲಿ ತಾಳ್ಮೆ ಮತ್ತು ಆತ್ಮವಿಶ್ವಾಸ ಅತಿ ಮುಖ್ಯ" ಎನ್ನುತ್ತಾ ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ತುಂಬಿದರು. ಈ ವಿಶೇಷ ಸಂವಾದವು ವಿದ್ಯಾರ್ಥಿಗಳಲ್ಲಿ ಹೊಸ ಚೈತನ್ಯವನ್ನು ಮೂಡಿಸಿತು. ಶೈಕ್ಷಣಿಕ ವಿಷಯಗಳ ಜೊತೆಗೆ ಪ್ರಚಲಿತ ವಿದ್ಯಮಾನಗಳ ಅರಿವು ಮೂಡಿಸುವ ಉದ್ದೇಶದಿಂದ ಹಮ್ಮಿಕೊಳ್ಳಲಾದ ಈ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯರು, ಉಪನ್ಯಾಸಕ ವೃಂದ ಹಾಗೂ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಮಾನ್ವಿಯಲ್ಲಿ ಈದ್ ಸೌಹಾರ್ದ ಕೂಟ ;ಶಾಂತಿ, ಪ್ರೀತಿ ಮತ್ತು ಸಾಮರಸ್ಯದ ಸಂದೇಶ ಸಾರಿದ ಶಾಸಕ ಜಿ. ಹಂಪಯ್ಯ ನಾಯಕ್

**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ಜಮಾತೆ ಇಸ್ಲಾಮಿ ಹಿಂದ್ ಮಾನ್ವಿ ವತಿಯಿಂದ ಮಾನ್ವಿ ನಗರದಲ್ಲಿ ಆಯೋಜಿಸಲಾಗಿದ್ದ ಸೌಹಾರ್ದ ಕೂಟ ಕಾರ್ಯಕ್ರಮವು ಧರ್ಮೀಯ ಸಾಮರಸ್ಯ ಮತ್ತು ಸಾಮಾಜಿಕ ಏಕತೆಯ ಸಂದೇಶ ಸಾರುವ ವೇದಿಕೆಯಾಗಿ ಗಮನಸೆಳೆಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ. ಹಂಪಯ್ಯ ನಾಯಕ್ ಸಾಹುಕಾರ್ ಮಾತನಾಡಿ, ಸೌಹಾರ್ದ ಕೂಟಗಳು ಸಮಾಜದಲ್ಲಿ ಸಹಬಾಳ್ವೆ, ಪರಸ್ಪರ ಗೌರವ ಹಾಗೂ ಮಾನವೀಯ ಮೌಲ್ಯಗಳನ್ನು ಬಲಪಡಿಸುವ ಮಹತ್ವದ ಕಾರ್ಯಕ್ರಮಗಳಾಗಿವೆ ಎಂದು ಹೇಳಿದರು.**

ಇಂತಹ ಸಮಾರಂಭಗಳು ಜಾತಿ, ಮತ, ಭಾಷೆ, ಸಂಸ್ಕೃತಿ ಭೇದಗಳನ್ನು ಮೀರಿ




ಜನರನ್ನು ಒಂದೇ ಕುಟುಂಬದಂತೆ ಸಂಪರ್ಕಿಸುವ ಕಾರ್ಯ ಮಾಡುತ್ತವೆ. ಸಮಾಜದಲ್ಲಿ ಶಾಂತಿ ನೆಲೆಸಬೇಕಾದರೆ ಪರಸ್ಪರ ವಿಶ್ವಾಸ ಮತ್ತು ಸಹಕಾರ ಅತ್ಯಂತ ಅಗತ್ಯ ಎಂದು ಅವರು ತಿಳಿಸಿದರು. ರಂಜಾನ್ ಹಬ್ಬವು ತ್ಯಾಗ, ಸಹನೆ, ಸೇವಾಭಾವ ಮತ್ತು ಮಾನವೀಯತೆಯ ಮಹತ್ವವನ್ನು ಸಾರುತ್ತದೆ. ಉಪವಾಸದ ಮೂಲಕ ಆತ್ಮಶುದ್ಧಿ ಸಾಧಿಸುವ ಈ ಪವಿತ್ರ ಕಾಲದಲ್ಲಿ ಮಾನವ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು. ಧಾರ್ಮಿಕ ವೈವಿಧ್ಯತೆಯೇ ಭಾರತದ ಶಕ್ತಿ. ನಾವು ನಮ್ಮ ಧರ್ಮವನ್ನು ಗೌರವಿಸುವಂತೆ ಇತರರ ಧರ್ಮ ಮತ್ತು ಸಂಸ್ಕೃತಿಯನ್ನೂ ಗೌರವಿಸಿದಾಗ ಮಾತ್ರ ಸಮಾಜದಲ್ಲಿ ಶಾಂತಿ



ಹಾಗೂ ಸಮರಸತೆ ಸಾಧ್ಯವಾಗುತ್ತದೆ.

ಇಂತಹ ಸೌಹಾರ್ದ ಕೂಟಗಳು ಸಮಾಜಕ್ಕೆ ಉತ್ತಮ ಸಂದೇಶವನ್ನು ನೀಡುವ ಜೊತೆಗೆ ಯುವಜನತೆಗೆ ಸರಿಯಾದ ದಿಕ್ಕು ತೋರಿಸುತ್ತವೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಕಲ್ಮಠ ಮಾನ್ವಿಯ ಶ್ರೀ ವಿರೂಪಾಕ್ಷ ಪಂಡಿತರಾಧ್ಯ ಮಹಾಸ್ವಾಮಿಗಳು, ಸೈಂಟ್ ಮೇರಿ ಚರ್ಚ್ ಧರ್ಮ ಕೇಂದ್ರದ ಫಾದರ್ ವೆನಸೆಂಟ್ ಸುರೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ಗಫೂರ್ ಸಾಬ್, ಮಾಜಿ ಶಾಸಕ ಬ್ಯಾಗವಾಟ್ ಬಸನಗೌಡ, ಪಂಚ ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಬಿ.ಕೆ. ಅಂಬರೇಶಪ್ಪ, ಪ್ರವಚನಕಾರ ಜನಾಬ್ ಲಾಲ್ ಹುಸೇನ್ ಕಂದಗಲ್, ಸೈಯ್ಯದ್ ಅಕ್ಬರ್ ಪಾಷಾ ಹುಸೇನಿ, ಸೈಯದ್ ಖಾಲಿದ ಖಾದ್ರಿ, ಮೌಲಾನ ಅನ್ವರ್ ಪಾಷ ಉಮರಿ, ಅಬ್ದುಲ್ ಕರೀಂ ಖಾನ್ ಸಾಬ್, ಶೇಕ್ ಫರೀದ್ ಉಮ್ರಿ, ಶೇಕ್ ಬಾಬಾ ಹುಸೇನ್, ಮಾಜಿ ಅಧ್ಯಕ್ಷ ಅಬ್ದುಲ್ ರಹಮಾನ್ ಸೇರಿದಂತೆ ಹಲವಾರು ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ಕಾರ್ಯಕ್ರಮವು ವಿವಿಧ ಧರ್ಮಗಳ ಪ್ರತಿನಿಧಿಗಳ ಸಾನ್ನಿಧ್ಯದಲ್ಲಿ ನಡೆದಿದ್ದು, ಸಾಮರಸ್ಯ ಮತ್ತು ಸಹೋದರತ್ವದ ಸಂದೇಶವನ್ನು ಸಮಾಜಕ್ಕೆ ಸಾರಿತು.